# ವಿನ್ಯಾಸಗಳ ಅಧಿನಿಯಮ, 2000

**(30.03.09ರ ಭಾರತ ವಿಶೇಷ ರಾಜಪತ್ರದ IXನೇ ಭಾಗದ 1ನೇ ವಿಭಾಗದ 40ನೇ ಸಂಪುಟದ 1ನೇ ಸಂಚಿಕೆಯಲ್ಲಿ 175 ರಿಂದ 198ರ ವರೆಗಿನ ಪುಟಗಳಲ್ಲಿ ಪ್ರಕಟವಾಗಿದೆ)**

## ಪ್ರಕರಣಗಳ ಅನುಕ್ರಮಣಿಕೆ

**ಪ್ರಕರಣಗಳು:**


### ಅಧ್ಯಾಯ – I
### ಪ್ರಾರಂಭಿಕ

1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಪರಿಭಾಷೆಗಳು

### ಅಧ್ಯಾಯ– II
### ವಿನ್ಯಾಸಗಳ ನೋಂದಣಿ

3. ನಿಯಂತ್ರಕ ಮತ್ತು ಇತರೆ ಅಧಿಕಾರಿಗಳು
4. ಕೆಲವು ವಿನ್ಯಾಸಗಳ ನೋಂದಣಿಯ ನಿಷೇಧ
5. ವಿನ್ಯಾಸಗಳ ನೋಂದಣಿಗಾಗಿ ಅರ್ಜಿ
6. ನಿರ್ದಿಷ್ಟ ವಸ್ತುವಿಗೆ ಸಂಬಂಧಪಟ್ಟಂತೆ ನೋಂದಣಿ ಮಾಡುವುದು
7. ನೋಂದಾಯಿತ ವಿನ್ಯಾಸಗಳ ವಿವರಗಳ ಪ್ರಕಟಣೆ
8. ಅರ್ಜಿಯನ್ನು ಬದಲಿಯಾಗಿ ಮುಂದುವರೆಸುವುದು, ಇತ್ಯಾದಿಗಳ ಸಂಬಂಧದಲ್ಲಿ ಆದೇಶಗಳನ್ನು ಹೊರಡಿಸಲು ನಿಯಂತ್ರಕನ ಅಧಿಕಾರ
9. ನೋಂದಣಿ ಪ್ರಮಾಣ ಪತ್ರ
10. ವಿನ್ಯಾಸಗಳ ರಿಜಿಸ್ಟರು

### ಅಧ್ಯಾಯ –III
### ನೋಂದಾಯಿತ ವಿನ್ಯಾಸಗಳಲ್ಲಿ ಕೃತಿಸ್ವಾಮ್ಯ

11. ನೋಂದಣಿಯಾದಾಗ ಕೃತಿಸ್ವಾಮ್ಯ
12. ರದ್ದಾದ ವಿನ್ಯಾಸಗಳನ್ನು ಪೂರ್ವಸ್ಥಿತಿಗೆ ತರುವುದು
13. ರದ್ದಾದ ವಿನ್ಯಾಸಗಳನ್ನು ಪೂರ್ವಸ್ಥಿತಿಗೆ ತರುವುದಕ್ಕಾಗಿ ಸಲ್ಲಿಸಿದ ಅರ್ಜಿಗಳನ್ನು ವಿಲೆ ಮಾಡುವ ಕಾರ್ಯವಿಧಾನ
14. ರದ್ದಾದ ವಿನ್ಯಾಸವನ್ನು ಪೂರ್ವಸ್ಥಿತಿಗೆ ತಂದಾಗ ಮಾಲೀಕನ ಹಕ್ಕುಗಳು
15. ಮಾರಾಟವಾದ ಮೇಲೆ ವಶಾವಣೆ ಮಾಡುವ ಮುಂಚೆ ಅಗತ್ಯತೆಗಳು
16. ಕೃತಿಸ್ವಾಮ್ಯವನ್ನು ಬಹಿರಂಗಪಡಿಸುವುದರ ಪರಿಣಾಮ

17. ನೋಂದಾಯಿತ ವಿನ್ಯಾಸಗಳ ಪರಿಶೀಲನೆ

18. ಕೃತಿಸ್ವಾಮ್ಯದ ಅಸ್ತಿತ್ವದ ಬಗ್ಗೆ ಮಾಹಿತಿ

19. ನೋಂದಣಿಯ ರದ್ದಿಯಾತಿ

20. ವಿನ್ಯಾಸಗಳು ಸರ್ಕಾರಕ್ಕೆ ಬಂಧನಕಾರಿಯಾಗಿರುವುದು

**ಅಧ್ಯಾಯ – IV**

**ಕೈಗಾರಿಕಾ ಮತ್ತು ಅಂತರ ರಾಷ್ಟ್ರೀಯ ವಸ್ತು ಪ್ರದರ್ಶನಗಳು**

21. ವಸ್ತು ಪ್ರದರ್ಶನಗಳಿಗೆ ಸಂಬಂಧಿಸಿದ ಉಪಬಂಧಗಳು

**ಅಧ್ಯಾಯ – V**

**ಕಾನೂನು ವ್ಯವಹರಣೆಗಳು**

22. ನೋಂದಾಯಿತ ವಿನ್ಯಾಸದ ಚೌರ್ಯ

23. ಅಧಿನಿಯಮದ ಕೆಲವು ಉಪಬಂಧಗಳನ್ನು ವಿನ್ಯಾಸಗಳ ಪೇಟೆಂಟುಗಳಿಗೆ ಅನ್ವಯಿಸುವುದು

**ಅಧ್ಯಾಯ – VI**

**ಸಾಮಾನ್ಯ ಫೀಜುಗಳು**

24. ಫೀಜುಗಳು

**ಪೇಟೆಂಟ್ ಕಚೇರಿಯಲ್ಲಿನ ರಿಜಿಸ್ಟರುಗಳಿಗೆ ಮತ್ತು ಇತರ ದಸ್ತಾವೇಜುಗಳಿಗೆ ಸಂಬಂಧಿಸಿದ ಉಪಬಂಧಗಳು**

25. ವಿಶ್ವಾಸದ ನೋಟೀಸನ್ನು ರಿಜಿಸ್ಟರಿನಲ್ಲಿ ನಮೂದಿಸದಿರುವುದು

26. ರಿಜಿಸ್ಟರುಗಳ ಪರಿಶೀಲನೆ ಮತ್ತು ಅವುಗಳ ಉದ್ಧೃತಗಳು

27. ನಿಯಂತ್ರಕನ ವರದಿಗಳಿಗೆ ಸಂಬಂಧಿಸಿದಂತೆ ವಿಶೇಷ ಹಕ್ಕು

28. ಅರ್ಜಿಯನ್ನು ಮುಂದುವರೆಸದಿರುವಲ್ಲಿ ತಪಶೀಲು, ರೇಖಾಚಿತ್ರ, ಇತ್ಯಾದಿಗಳ ನಿಷೇಧ ಮತ್ತು ಪ್ರಕಟಣೆ

29. ಲಿಪಿಕ ದೋಷಗಳನ್ನು ಸರಿಪಡಿಸುವುದಕ್ಕೆ ನಿಯಂತ್ರಕನ ಅಧಿಕಾರ

30. ರಿಜಿಸ್ಟರುಗಳಲ್ಲಿ ಹಸ್ತಾಂತರಣ ಮತ್ತು ವರ್ಗಾವಣೆಗಳ ನಮೂದು

31. ರಿಜಿಸ್ಟರನ್ನು ಸರಿಪಡಿಸುವುದು

**ಅಧ್ಯಾಯ – VII**

**ನಿಯಂತ್ರಕನ ಅಧಿಕಾರಗಳು ಮತ್ತು ಕರ್ತವ್ಯಗಳು**

32. ಈ ಅಧಿನಿಯಮದ ಮೇರೆಗಿನ ವ್ಯವಹರಣೆಗಳಲ್ಲಿ ನಿಯಂತ್ರಕನ ಅಧಿಕಾರಗಳು

33. ನಿಯಂತ್ರಕನಿಂದ ವಿವೇಚನಾಧಿಕಾರದ ಚಲಾವಣೆ

34. ಕೇಂದ್ರ ಸರ್ಕಾರದ ನಿರ್ದೇಶನಗಳನ್ನು ಪಡೆದುಕೊಳ್ಳಲು ನಿಯಂತ್ರಕನ ಅಧಿಕಾರ

35. ಕೆಲವು ಸಂದರ್ಭಗಳಲ್ಲಿ ವಿನ್ಯಾಸವನ್ನು ನೋಂದಾಯಿಸಲು ನಿರಾಕರಣೆ

36. ಉಚ್ಚ ನ್ಯಾಯಾಲಯಕ್ಕೆ ಅಪೀಲುಗಳು

## ಅಧ್ಯಾಯ – VIII

### ಸಾಕ್ಷ್ಯ, ಇತ್ಯಾದಿ

37. ನಿಯಂತ್ರಕನ ಮುಂದಿರುವ ಸಾಕ್ಷ್ಯ

38. ನಿಯಂತ್ರಕನ ಪ್ರಮಾಣಪತ್ರವು ಸಾಕ್ಷ್ಯವಾಗಿರುವುದು

39. ಪೇಟೆಂಟ್ ಕಚೇರಿಯಲ್ಲಿನ ದಸ್ತಾವೇಜುಗಳ ಸಾಕ್ಷ್ಯ

40. ಅಂಚೆ ಮೂಲಕ ಅರ್ಜಿ ಮತ್ತು ನೋಟೀಸುಗಳು

41. ಶಿಶು, ಮನೋವಿಕಲ ಮೊದಲಾದವರಿಂದ ಘೋಷಣೆ

42. ಕೆಲವು ನಿರ್ಬಂಧಕ ಷರತ್ತುಗಳನ್ನು ಬಿಟ್ಟುಬಿಡುವುದು

## ಅಧ್ಯಾಯ – IX

### ಏಜೆನ್ಸಿ

43. ಏಜೆನ್ಸಿ

## ಅಧ್ಯಾಯ – X

### ಕೇಂದ್ರ ಸರ್ಕಾರದ ಅಧಿಕಾರಗಳು, ಇತ್ಯಾದಿ

44. ಯುನೈಟೆಡ್ ಕಿಂಗ್‌ಡಮ್ ಮತ್ತು ಇತರೆ ಒಡಂಬಡಿಕೆಯ ರಾಷ್ಟ್ರಗಳು ಅಥವಾ ರಾಷ್ಟ್ರಗಳ ಸಮೂಹ ಅಥವಾ ಅಂತರಸರ್ಕಾರಿ ಸಂಸ್ಥೆಗಳೊಂದಿಗೆ ಪರಸ್ಪರ ವ್ಯವಸ್ಥೆ

45. ನಿಯಂತ್ರಕನ ವರದಿಯನ್ನು ಸಂಸತ್ತಿನ ಮುಂದೆ ಇಡುವುದು

46. ಭಾರತದ ಭದ್ರತೆಯ ರಕ್ಷಣೆ

47. ನಿಯಮಗಳನ್ನು ರಚಿಸಲು ಕೇಂದ್ರ ಸರ್ಕಾರದ ಅಧಿಕಾರ

## ಅಧ್ಯಾಯ – XI

### ನಿರಸನ ಮತ್ತು ಉಳಿಸುವಿಕೆ

48. ನಿರಸನ ಮತ್ತು ಉಳಿಸುವಿಕೆಗಳು

# ವಿನ್ಯಾಸಗಳ ಅಧಿನಿಯಮ, 2000

(2000ದ ಅಧಿನಿಯಮ ಸಂಖ್ಯೆ 16)

[25ನೇ ಮೇ 2000]

ವಿನ್ಯಾಸಗಳ ರಕ್ಷಣೆಗೆ ಸಂಬಂಧಿಸಿದ ಕಾನೂನನ್ನು ಕ್ರೋಡೀಕರಿಸುವ ಮತ್ತು ತಿದ್ದುಪಡಿ ಮಾಡುವ ಅಧಿನಿಯಮ.

ಇದು ಭಾರತ ಗಣರಾಜ್ಯದ ಐವತ್ತೊಂದನೆಯ ವರ್ಷದಲ್ಲಿ ಸಂಸತ್ತಿನಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:

## ಅಧ್ಯಾಯ – I

## ಪ್ರಾರಂಭಿಕ

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ವಿನ್ಯಾಸಗಳ ಅಧಿನಿಯಮ, 2000 ಎಂದು ಕರೆಯತಕ್ಕದ್ದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ *ದಿನಾಂಕದಂದು ಜಾರಿಗೆ ಬರತಕ್ಕದ್ದು ಮತ್ತು ಈ ಅಧಿನಿಯಮದ ಬೇರೆ ಬೇರೆ ಉಪಬಂಧಗಳಿಗಾಗಿ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು ಮತ್ತು ಅಂಥ ಯಾವುದೇ ಉಪಬಂಧದಲ್ಲಿ ಈ ಅಧಿನಿಯಮದ ಪ್ರಾರಂಭಕ್ಕೆ ಮಾಡಲಾದ ಯಾವುದೇ ಉಲ್ಲೇಖವನ್ನು ಆ ಉಪಬಂಧವು ಜಾರಿಗೆ ಬರುವ ದಿನಾಂಕಕ್ಕೆ ಮಾಡಲಾದ ಉಲ್ಲೇಖವೆಂಬುದಾಗಿ ಅರ್ಥೈಸತಕ್ಕದ್ದು.

**2. ಪರಿಭಾಷೆಗಳು.–** ಈ ಅಧಿನಿಯಮದಲ್ಲಿ, ವಿಷಯಕ್ಕೆ ಅಥವಾ ಸಂದರ್ಭಕ್ಕೆ ವಿರುದ್ಧವಾದುದು ಏನಾದರೂ ಇದ್ದ ಹೊರತು,–

(ಎ) "ವಸ್ತು" ಎಂದರೆ ತಯಾರಿಕೆಯ ಯಾವುದೇ ವಸ್ತು ಮತ್ತು ಕೃತಕವಾದ ಅಥವಾ ಭಾಗಶಃ ಕೃತಕವಾದ ಮತ್ತು ಭಾಗಶಃ ನೈಸರ್ಗಿಕವಾದ ಯಾವುದೇ ಪದಾರ್ಥ ಎಂದು ಅರ್ಥ ಮತ್ತು ಅದರಲ್ಲಿ ತಯಾರಿಸಲು ಮತ್ತು ಪ್ರತ್ಯೇಕವಾಗಿ ಮಾರಾಟ ಮಾಡಲು ಯೋಗ್ಯವಿರುವ ವಸ್ತುವಿನ ಯಾವುದೇ ಭಾಗವೂ ಸೇರುತ್ತದೆ;

(ಬಿ) "ನಿಯಂತ್ರಕ" ಎಂದರೆ 3ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ಪೇಟೆಂಟ್‌ಗಳ, ವಿನ್ಯಾಸಗಳ ಮತ್ತು ವ್ಯಾಪಾರ ಚಿಹ್ನೆಗಳ ಮಹಾನಿಯಂತ್ರಕ ಎಂದು ಅರ್ಥ;

(ಸಿ) "ಕೃತಿಸ್ವಾಮ್ಯ" ಎಂದರೆ ವಿನ್ಯಾಸವನ್ನು ನೋಂದಾಯಿಸಲಾದಂಥ ಯಾವುದೇ ವರ್ಗದಲ್ಲಿಯ ಯಾವುದೇ ವಸ್ತುವಿಗೆ ವಿನ್ಯಾಸವನ್ನು ಬಳಸಲು ಇರುವ ಅನನ್ಯ ಹಕ್ಕು ಎಂದು ಅರ್ಥ;

---

* 11.5.2001 ರಿಂದ ಜಾರಿಗೆ ಬಂದಿದೆ. ನೋಡಿ ಎಸ್.ಒ. 414 (ಇ), ದಿನಾಂಕ 11.5.2001

(ಡಿ) "ವಿನ್ಯಾಸ" ಎಂದರೆ ಯಾವುದೇ ವಸ್ತುವಿಗೆ ಸಂಬಂಧಿಸಿದಂತೆ ಎರಡು ಪರಿಮಾಣಗಳಲ್ಲಿ ಅಥವಾ ಮೂರು ಪರಿಮಾಣಗಳಲ್ಲಿ ಅಥವಾ ಎರಡೂ ರೂಪಗಳಲ್ಲಿ, ಕೈಯಿಂದ, ಯಂತ್ರದ ಮೂಲಕ ಅಥವಾ ರಾಸಾಯನಿಕವಾಗಿ, ಪ್ರತ್ಯೇಕವಾಗಿ ಆಗಲಿ ಅಥವಾ ಸಂಯೋಜಿತವಾಗಿ ಆಗಲಿ ಯಾವುವೇ ಕೈಗಾರಿಕಾ ಪ್ರಕ್ರಿಯೆ ಅಥವಾ ಸಾಧನಗಳಿಂದ ಆಕಾರ, ರಚನೆ, ಮಾದರಿ, ಅಲಂಕರಣ ಅಥವಾ ರೇಖೆಗಳ ಅಥವಾ ವರ್ಣಗಳ ಸಂಯೋಜನೆಯ ಮೂಲಕ ಬಳಸಿದ ಕೇವಲ ಲಕ್ಷಣಗಳು ಎಂದು ಅರ್ಥ, ಇವು ಸಿದ್ಧ ವಸ್ತುವಿನ ಸಂದರ್ಭದಲ್ಲಿ ಕಣ್ಣಿಗೆ ಆಕರ್ಷಕವಾಗಿರುತ್ತವೆ ಮತ್ತು ಕಣ್ಣಿನಿಂದ ಮಾತ್ರವೇ ನಿರ್ಣಯಿಸಬಹುದಾಗಿರುತ್ತವೆ. ಆದರೆ ರಚನೆಯ ಯಾವುದೇ ಪ್ರಕಾರ ಅಥವಾ ತತ್ವ ಅಥವಾ ವಾಸ್ತವವಾಗಿ ಕೇವಲ ಒಂದು ಯಾಂತ್ರಿಕ ಸಾಧನವಾಗಿರುವ ಯಾವುದನ್ನೇ ಆಗಲಿ ಒಳಗೊಳ್ಳುವುದಿಲ್ಲ; ಮತ್ತು ವ್ಯಾಪಾರ ಮತ್ತು ವ್ಯಾಪಾರಿ ಚಿಹ್ನೆಗಳ ಅಧಿನಿಯಮ, 1958ರ (1958ರ 43) 2ನೇ ಪ್ರಕರಣದ (1)ನೇ ಉಪ ಪ್ರಕರಣದ (V)ನೇ ಖಂಡದಲ್ಲಿ ಪರಿಭಾಷಿಸಿರುವಂತೆ ಯಾವುದೇ ವ್ಯಾಪಾರ ಚಿಹ್ನೆಯನ್ನು ಒಳಗೊಳ್ಳುವುದಿಲ್ಲ ಅಥವಾ ಭಾರತ ದಂಡ ಸಂಹಿತೆ, 1860 (1860ರ 45)ರ 479ನೇ ಪ್ರಕರಣದಲ್ಲಿ ಪರಿಭಾಷಿಸಿರುವಂತೆ ಸ್ವತ್ತಿನ ಗುರುತನ್ನು ಅಥವಾ ಕೃತಿಸ್ವಾಮ್ಯ ಅಧಿನಿಯಮ, 1957 (1957ರ 14)ರ 2ನೇ ಪ್ರಕರಣದ (ಸಿ) ಖಂಡದಲ್ಲಿ ಪರಿಭಾಷಿಸಿರುವಂಥ ಯಾವುದೇ ಕಲಾತ್ಮಕ ಕೃತಿಯನ್ನು ಒಳಗೊಳ್ಳುವುದಿಲ್ಲ.

(ಇ) "ಉಚ್ಚ ನ್ಯಾಯಾಲಯ" ಎಂಬುದು ಪೇಟೆಂಟ್‌ಗಳ ಅಧಿನಿಯಮ, 1970ರ (1970ರ 39) 2ನೇ ಪ್ರಕರಣದ (1)ನೇ ಖಂಡದಲ್ಲಿ ಅದಕ್ಕೆ ಕೊಟ್ಟಿರುವ ಅರ್ಥವನ್ನೇ ಹೊಂದಿರತಕ್ಕದ್ದು;

(ಎಫ್) "ಕಾನೂನು ಸಮ್ಮತ ಪ್ರತಿನಿಧಿ" ಎಂದರೆ ಮೃತ ವ್ಯಕ್ತಿಯ ಸಂಪದವನ್ನು ಕಾನೂನು ಸಮ್ಮತವಾಗಿ ಪ್ರತಿನಿಧಿಸುವ ವ್ಯಕ್ತಿ ಎಂದು ಅರ್ಥ;

(ಜಿ) ವಿನ್ಯಾಸಕ್ಕೆ ಸಂಬಂಧಿಸಿದಂತೆ, "ಮೂಲ" ಎಂದರೆ ಅಂಥ ವಿನ್ಯಾಸಕರ್ತನಿಂದ ಆರಂಭವಾದುದು ಎಂದು ಅರ್ಥ ಮತ್ತು ಅವು ಸ್ಪಷ್ಟವಾಗಿ ಹಳೆಯವಾಗಿದ್ದರೂ ಅವುಗಳನ್ನು ಬಳಸಿದಲ್ಲಿ ಇನ್ನೂ ಹೊಸದಾಗಿಯೇ ಕಾಣುವ ಪ್ರಕರಣಗಳೂ ಅದರಲ್ಲಿ ಸೇರುತ್ತವೆ;

(ಹೆಚ್) "ಪೇಟೆಂಟ್ ಕಚೇರಿ" ಎಂದರೆ ಪೇಟೆಂಟ್‌ಗಳ ಅಧಿನಿಯಮ, 1970 (1970ರ 39)ರ 74ನೇ ಪ್ರಕರಣದಲ್ಲಿ ಉಲ್ಲೇಖಿಸಿದ ಪೇಟೆಂಟ್ ಕಚೇರಿ ಎಂದು ಅರ್ಥ;

(ಐ) "ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಲಾದ ನಿಯಮಗಳ ಮೂಲಕ ನಿಯಮಿಸಲಾದುದು ಎಂದು ಅರ್ಥ;

(ಜೆ) "ಹೊಸ ಅಥವಾ ಮೂಲ ವಿನ್ಯಾಸದ ಮಾಲೀಕ " ಎಂದರೆ:–

(i) ವಿನ್ಯಾಸಕರ್ತನು ಉತ್ತಮ ಪ್ರತಿಫಲಕ್ಕಾಗಿ ಇತರೆ ಕೆಲವು ವ್ಯಕ್ತಿಗಳಿಗಾಗಿ ಕೃತಿಯನ್ನು ತಯಾರಿಸುವಲ್ಲಿ, ಯಾವ ವ್ಯಕ್ತಿಗಾಗಿ ವಿನ್ಯಾಸವನ್ನು ಹಾಗೆ ತಯಾರಿಸುತ್ತಾನೋ ಅಂಥ ವ್ಯಕ್ತಿ ಎಂದು ಅರ್ಥ;

(ii) ಯಾರೇ ವ್ಯಕ್ತಿಯು ಅನನ್ಯವಾಗಿ ಯಾರೇ ಇತರ ವ್ಯಕ್ತಿಯದ್ದಾಗಲಿ ಅಥವಾ ಅನ್ಯಥಾ ಯಾವುದೇ ವಸ್ತುವಿಗೆ ವಿನ್ಯಾಸವನ್ನು ಅಥವಾ ವಿನ್ಯಾಸಕ್ಕೆ ಅರ್ಜಿ ಸಲ್ಲಿಸುವ ಹಕ್ಕನ್ನು ಆರ್ಜಿಸಿದಲ್ಲಿ ವಿನ್ಯಾಸವನ್ನು ಅಥವಾ ಹಕ್ಕನ್ನು ಯಾವ ರೀತಿಯಲ್ಲಿ ಮತ್ತು ಎಷ್ಟರಮಟ್ಟಿಗೆ ಮತ್ತು

ಯಾವುದಕ್ಕಾಗಿ ಹಾಗೆ ಆರ್ಜಿಸಲಾಗಿದೆಯೋ ಆ ವಿನ್ಯಾಸವನ್ನು ಅಥವಾ ಹಕ್ಕನ್ನು ಹಾಗೆ ಆರ್ಜಿಸಿದ ವ್ಯಕ್ತಿ ಎಂದು ಅರ್ಥ; ಮತ್ತು

(iii) ಯಾವುದೇ ಇತರೆ ಸಂದರ್ಭದಲ್ಲಿ, ವಿನ್ಯಾಸ ಕರ್ತ ಎಂದು ಅರ್ಥ; ಮತ್ತು ವಿನ್ಯಾಸದಲ್ಲಿನ ಹಿತಾಸಕ್ತಿಯನ್ನು ಅಥವಾ ವಿನ್ಯಾಸವನ್ನು ಬಳಸುವ ಹಕ್ಕು ಮೂಲ ಮಾಲೀಕನಿಂದ ಯಾರೇ ಇತರೆ ವ್ಯಕ್ತಿಗೆ ಪ್ರಾಪ್ತವಾಗಿದ್ದರೆ ಆ ಯಾರೇ ಇತರ ವ್ಯಕ್ತಿಯೂ ಒಳಗೊಳ್ಳುತ್ತಾನೆ.

## ಅಧ್ಯಾಯ- II

## ವಿನ್ಯಾಸಗಳ ನೋಂದಣಿ

**3. ನಿಯಂತ್ರಕ ಮತ್ತು ಇತರೆ ಅಧಿಕಾರಿಗಳು.-** (1) ವ್ಯಾಪಾರ ಮತ್ತು ಮಾರಾಟ ಸರಕುಗಳ ಚಿಹ್ನೆಗಳ ಅಧಿನಿಯಮ, 1958ರ (1958ರ 43)ರ 4ನೇ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗೆ ನೇಮಕಗೊಂಡ ಪೇಟೆಂಟುಗಳ, ವಿನ್ಯಾಸಗಳ ಮತ್ತು ವ್ಯಾಪಾರ ಚಿಹ್ನೆಗಳ ಮಹಾ ನಿಯಂತ್ರಕನು ಈ ಅಧಿನಿಯಮದ ಉದ್ದೇಶಗಳಿಗಾಗಿ ವಿನ್ಯಾಸಗಳ ನಿಯಂತ್ರಕನಾಗಿರತಕ್ಕದ್ದು.

(2) ಈ ಅಧಿನಿಯಮದ ಉದ್ದೇಶಗಳಿಗಾಗಿ, ಕೇಂದ್ರ ಸರ್ಕಾರವು, ತಾನು ಸೂಕ್ತವೆಂದು ಭಾವಿಸಬಹುದಾದಷ್ಟು ಸಂಖ್ಯೆಯ, ಪರೀಕ್ಷಕರನ್ನು ಮತ್ತು ಅಂಥ ಪದನಾಮಗಳೊಂದಿಗೆ ಇತರೆ ಅಧಿಕಾರಿಗಳನ್ನು ನೇಮಕ ಮಾಡಬಹುದು.

(3) ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, (2)ನೇ ಉಪಪ್ರಕರಣದ ಮೇರೆಗೆ ನೇಮಕಗೊಂಡ ಅಧಿಕಾರಿಗಳು, ನಿಯಂತ್ರಕನ ಅಧೀಕ್ಷಣೆ ಮತ್ತು ನಿರ್ದೇಶನಗಳ ಮೇರೆಗೆ, ಈ ಅಧಿನಿಯಮದ ಮೇರೆಗೆ ನಿಯಂತ್ರಕನು ಕಾಲಕಾಲಕ್ಕೆ ವಿಶೇಷ ಅಥವಾ ಸಾಮಾನ್ಯ ಲಿಖಿತ ಆದೇಶದ ಮೂಲಕ ತನ್ನ ಪ್ರಕಾರ್ಯಗಳನ್ನು ನಿರ್ವಹಿಸಲು ಅವರಿಗೆ ಅಧಿಕಾರ ನೀಡಬಹುದಾದಂಥ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

(4) (3)ನೇ ಉಪಪ್ರಕರಣದ ಉಪಬಂಧಗಳ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ, ನಿಯಂತ್ರಕನು, ಲಿಖಿತ ಆದೇಶದ ಮೂಲಕ ಮತ್ತು ಕಾರಣಗಳನ್ನು ಅದರಲ್ಲಿ ದಾಖಲಿಸಿ, (2)ನೇ ಉಪಪ್ರಕರಣದ ಮೇರೆಗೆ ನೇಮಕಗೊಂಡ ಅಧಿಕಾರಿಯ ಮುಂದೆ ಬಾಕಿ ಇರುವ ಯಾವುದೇ ವಿಷಯವನ್ನು ಹಿಂತೆಗೆದುಕೊಳ್ಳಬಹುದು ಮತ್ತು ಅಂಥ ವಿಷಯವನ್ನು ಹೊಸದಾಗಿ ಅಥವಾ ಅದನ್ನು ಹಾಗೆ ಹಿಂತೆಗೆದುಕೊಂಡಾಗ ಇದ್ದಂಥ ಹಂತದಿಂದ ತಾನೇ ಅದನ್ನು ವ್ಯವಹರಿಸಬಹುದು ಅಥವಾ (2)ನೇ ಉಪಪ್ರಕರಣದ ಮೇರೆಗೆ ನೇಮಕಗೊಂಡ ಮತ್ತೊಬ್ಬ ಅಧಿಕಾರಿಗೆ ಅದನ್ನು ವರ್ಗಾಯಿಸಬಹುದು, ಆಗ ಆ ಅಧಿಕಾರಿಯು ವರ್ಗಾವಣೆಯ ಆದೇಶದಲ್ಲಿನ ವಿಶೇಷ ನಿರ್ದೇಶನಗಳಿಗೊಳಪಟ್ಟು ಆ ವಿಷಯಗಳನ್ನು ಹೊಸದಾಗಿ ಅಥವಾ ಹಾಗೆ ವರ್ಗಾವಣೆಯಾದಾಗ ಇದ್ದಂಥ ಹಂತದಿಂದ ಮುಂದುವರಿಸಬಹುದು.

**4. ಕೆಲವು ವಿನ್ಯಾಸಗಳ ನೋಂದಣಿಯ ನಿಷೇಧ.-** ವಿನ್ಯಾಸವನ್ನು,-

(ಎ) ಅದು ಹೊಸದು ಆಗಿರದಿದ್ದರೆ ಅಥವಾ ಮೂಲದ್ದು ಆಗಿರದಿದ್ದರೆ; ಅಥವಾ

(ಬಿ) ಸಲ್ಲಿಸಿದ ದಿನಾಂಕಕ್ಕೆ ಮುಂಚಿತವಾಗಿ ಅಥವಾ ಅನ್ವಯವಾಗುವ ಸಂದರ್ಭದಲ್ಲಿ ನೋಂದಣಿಗಾಗಿ ಅರ್ಜಿಯ ಆದ್ಯತಾ ದಿನಾಂಕಕ್ಕೆ ಮುಂಚಿತವಾಗಿ ಮೂರ್ತ ರೂಪದಲ್ಲಿ ಪ್ರಕಟಿಸುವ ಮೂಲಕ ಅಥವಾ ಬಳಸುವ ಮೂಲಕ ಅಥವಾ ಇತರ ಯಾವುದೇ ರೀತಿಯಲ್ಲಿ ಭಾರತದ ಯಾವುದೇ

ಸ್ಥಳದಲ್ಲಿ ಅಥವಾ ಯಾವುದೇ ಇತರ ದೇಶದಲ್ಲಿ ಸಾರ್ವಜನಿಕರಿಗೆ ಅದನ್ನು ಬಹಿರಂಗಪಡಿಸಿದ್ದರೆ; ಅಥವಾ

(ಸಿ) ಅದನ್ನು ಪರಿಚಿತ ವಿನ್ಯಾಸಗಳಿಂದ ಅಥವಾ ಪರಿಚಿತ ವಿನ್ಯಾಸಗಳ ಸಂಯೋಜನೆಯಿಂದ ಗಣನೀಯವಾಗಿ ಪ್ರತ್ಯೇಕಿಸಲಾಗದಿದ್ದರೆ;

(ಡಿ) ಅದರಲ್ಲಿ ನಿಂದಾತ್ಮಕ ಅಥವಾ ಅಶ್ಲೀಲ ವಿಷಯ ಅಡಕವಾಗಿದ್ದರೆ ಅಥವಾ ಒಳಗೊಂಡಿದ್ದರೆ

– ನೋಂದಾಯಿಸತಕ್ಕದ್ದಲ್ಲ.

**5. ವಿನ್ಯಾಸಗಳ ನೋಂದಣಿಗಾಗಿ ಅರ್ಜಿ.–** (1) ನಿಯಂತ್ರಕನು, ಯಾವುದೇ ದೇಶದಲ್ಲಿ ಈ ಮೊದಲೇ ಪ್ರಕಟಿಸಿರದ ಮತ್ತು ಅದು ಸಾರ್ವಜನಿಕ ಸುವ್ಯವಸ್ಥೆಗೆ ಅಥವಾ ನೈತಿಕತೆಗೆ ವಿರುದ್ಧವಾಗಿರದ ಯಾವುದೇ ಹೊಸ ಅಥವಾ ಮೂಲ ವಿನ್ಯಾಸದ ಮಾಲೀಕನೆಂಬುದಾಗಿ ಕ್ಲೇಮು ಮಾಡುವ ಯಾರೇ ವ್ಯಕ್ತಿಯು ಅರ್ಜಿಯನ್ನು ಸಲ್ಲಿಸಿದಾಗ ಈ ಅಧಿನಿಯಮದ ಮೇರೆಗೆ ಆ ವಿನ್ಯಾಸವನ್ನು ನೋಂದಾಯಿಸಬಹುದು:

ಪರಂತು, ನಿಯಂತ್ರಕನು ಅಂಥ ನೋಂದಣಿಯನ್ನು ಮಾಡುವುದಕ್ಕೆ ಮುಂಚೆ ಅಂಥ ವಿನ್ಯಾಸವನ್ನು ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳ ಮೇರೆಗೆ ನೋಂದಣಿ ಮಾಡಲು ಅರ್ಹವಾಗಿದೆಯೇ ಎಂಬುದನ್ನು ಪರೀಕ್ಷಿಸುವುದಕ್ಕಾಗಿ ಅರ್ಜಿಯನ್ನು 3ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ನೇಮಕಗೊಂಡ ಪರೀಕ್ಷಕನಿಗೆ ಕಳುಹಿಸತಕ್ಕದ್ದು ಮತ್ತು ಹಾಗೆ ಕಳುಹಿಸಿದಾಗ ಪರೀಕ್ಷಕನು ನೀಡಿದ ವರದಿಯನ್ನು ಪರಿಶೀಲಿಸತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ ಸಲ್ಲಿಸಿದ ಪ್ರತಿಯೊಂದು ಅರ್ಜಿಯು ನಿಯಮಿಸಿದ ನಮೂನೆಯಲ್ಲಿರತಕ್ಕದ್ದು ಮತ್ತು ನಿಯಮಿಸಿದ ರೀತಿಯಲ್ಲಿ ಪೇಟೆಂಟ್ ಕಚೇರಿಯಲ್ಲಿ ದಾಖಲು ಮಾಡತಕ್ಕದ್ದು ಮತ್ತು ಅರ್ಜಿಯ ಜೊತೆಗೆ ನಿಯಮಿಸಿದ ಫೀಜೂ ಇರತಕ್ಕದ್ದು.

(3) ವಿನ್ಯಾಸವನ್ನು ಒಂದಕ್ಕಿಂತ ಹೆಚ್ಚಿಲ್ಲದ ವರ್ಗದಲ್ಲಿ ನೋಂದಾಯಿಸಬಹುದು ಮತ್ತು ವಿನ್ಯಾಸವನ್ನು ಯಾವ ವರ್ಗದಲ್ಲಿ ನೋಂದಾಯಿಸಬೇಕೋ ಆ ವರ್ಗದ ಬಗ್ಗೆ ಸಂದೇಹವಿದ್ದ ಸಂದರ್ಭದಲ್ಲಿ, ಆ ಬಗ್ಗೆ ನಿಯಂತ್ರಕನು ಆ ಪ್ರಶ್ನೆಯ ಬಗ್ಗೆ ತೀರ್ಮಾನಿಸಬಹುದು.

(4) ನಿಯಂತ್ರಕನು, ಅವನು ಸೂಕ್ತವೆಂದು ಭಾವಿಸಿದರೆ, ನೋಂದಣಿಗಾಗಿ ಅವನಿಗೆ ಹಾಜರುಪಡಿಸಿದ ಯಾವುದೇ ವಿನ್ಯಾಸದ ನೋಂದಣಿ ಮಾಡಲು ನಿರಾಕರಿಸಬಹುದು, ಆದರೆ ಅಂಥ ನಿರಾಕರಣೆಯಿಂದ ಬಾಧಿತನಾದ ಯಾರೇ ವ್ಯಕ್ತಿಯು ಉಚ್ಚ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಬಹುದು.

(5) ಅರ್ಜಿದಾರನ ಯಾವುದೇ ತಪ್ಪಿನಿಂದಾಗಿ ಅಥವಾ ನಿರ್ಲಕ್ಷ್ಯದಿಂದಾಗಿ ನಿಯಮಿಸಿದ ಕಾಲದೊಳಗಾಗಿ ಅರ್ಜಿಯನ್ನು ನೋಂದಣಿ ಮಾಡಲು ಸಾಧ್ಯವಾಗುವ ಹಾಗೆ ಪೂರ್ಣಗೊಳಿಸಿರದಿದ್ದರೆ ಅದನ್ನು ಬಿಟ್ಟುಬಿಡಲಾಗಿದೆಯೆಂದು ಭಾವಿಸತಕ್ಕದ್ದು.

(6) ವಿನ್ಯಾಸವನ್ನು ನೋಂದಾಯಿಸಿದಾಗ, ನೋಂದಣಿಗಾಗಿ ಅರ್ಜಿಯನ್ನು ಸಲ್ಲಿಸಿದ ದಿನಾಂಕವೆಂದು ಅದನ್ನು ನೋಂದಾಯಿಸತಕ್ಕದ್ದು.

**6. ನಿರ್ದಿಷ್ಟ ವಸ್ತುವಿಗೆ ಸಂಬಂಧಪಟ್ಟಂತೆ ನೋಂದಣಿ ಮಾಡುವುದು.–** (1) ವಸ್ತುಗಳ ನಿಯಮಿಸಿದ ವರ್ಗದಲ್ಲಿ ಅಡಕವಾದ ಯಾವುವೇ ಅಥವಾ ಎಲ್ಲಾ ವಸ್ತುಗಳ ಸಂಬಂಧದಲ್ಲಿ ವಿನ್ಯಾಸವನ್ನು ನೋಂದಣಿ ಮಾಡಬಹುದು.

(2) ಯಾವುದೇ ವಸ್ತುವು ಯಾವ ವರ್ಗದಲ್ಲಿ ಬರುತ್ತದೆಂಬುದರ ಬಗ್ಗೆ ಯಾವುದೇ ಪ್ರಶ್ನೆ ಉದ್ಭವಿಸಿದರೆ ಅದನ್ನು ನಿಯಂತ್ರಕನು ನಿರ್ಧರಿಸತಕ್ಕದ್ದು ಹಾಗೂ ಆ ವಿಷಯದಲ್ಲಿ ಅವನ ತೀರ್ಮಾನವೇ ಅಂತಿಮವಾಗಿರತಕ್ಕದ್ದು.

(3) ವಸ್ತುವಿನ ವರ್ಗದಲ್ಲಿ ಅಡಕವಾದ ಯಾವುದೇ ವಸ್ತುವಿನ ಸಂಬಂಧದಲ್ಲಿ ವಿನ್ಯಾಸವನ್ನು ನೋಂದಾಯಿಸಿರುವಲ್ಲಿ, ಆ ವಸ್ತುಗಳ ವರ್ಗದಲ್ಲಿ ಅಡಕವಾದ ಒಂದು ಅಥವಾ ಹೆಚ್ಚು ಇತರ ವಸ್ತುಗಳ ಸಂಬಂಧದಲ್ಲಿ ಅದನ್ನು ನೋಂದಾಯಿಸುವುದಕ್ಕೆ ವಿನ್ಯಾಸದ ಮಾಲೀಕನು ಸಲ್ಲಿಸಿದ ಅರ್ಜಿಯನ್ನು,–

(ಎ) ವಿನ್ಯಾಸವು ಹೊಸದಾಗಿಲ್ಲವೆಂಬ ಅಥವಾ ಮೂಲ ವಿನ್ಯಾಸ ಅಲ್ಲವೆಂಬ ಆಧಾರದ ಮೇಲೆ, ಈ ಹಿಂದೆಯೇ ನೋಂದಾಯಿಸಲಾಗಿತ್ತೆಂಬ ಕಾರಣ ಮಾತ್ರದಿಂದಲೇ; ಅಥವಾ

(ಬಿ) ವಿನ್ಯಾಸವು ಭಾರತದಲ್ಲಿ ಅಥವಾ ಯಾವುದೇ ಇತರೆ ದೇಶದಲ್ಲಿ ಈ ಹಿಂದೆಯೇ ಪ್ರಕಟವಾಗಿದೆಯೆಂಬ ಆಧಾರದ ಮೇಲೆ, ಯಾವ ವಸ್ತುವಿಗೆ ಸಂಬಂಧಿಸಿದಂತೆ ಈ ಹಿಂದೆಯೇ ಅದನ್ನು ನೋಂದಾಯಿಸಲಾಗಿತ್ತೋ ಆ ವಸ್ತುವಿಗೆ ಅದನ್ನು ಬಳಸಲಾಗಿತ್ತೆಂಬ ಕಾರಣ ಮಾತ್ರದಿಂದಲೇ

– ನಿರಾಕರಿಸತಕ್ಕದ್ದಲ್ಲ, ಅಥವಾ ಅದರ ನೋಂದಣಿಯನ್ನು ಅಸಿಂಧುಗೊಳಿಸತಕ್ಕದ್ದಲ್ಲ:

ಪರಂತು, ಅಂಥ ತರುವಾಯದ ನೋಂದಣಿಯಿಂದಾಗಿ ವಿನ್ಯಾಸದಲ್ಲಿನ ಕೃತಿಸ್ವಾಮ್ಯದ ಅವಧಿಯು ಈ ಹಿಂದೆ ಮಾಡಿದ ನೋಂದಣಿಯಿಂದ ಉಂಟಾದ ಅವಧಿಗೂ ಮೀರಿ ವಿಸ್ತೃತವಾಗತಕ್ಕದ್ದಲ್ಲ.

(4) ಯಾರೇ ವ್ಯಕ್ತಿಯು ಯಾವುದೇ ವಸ್ತುವಿನ ಸಂಬಂಧದಲ್ಲಿ ವಿನ್ಯಾಸದ ನೋಂದಣಿಗಾಗಿ ಅರ್ಜಿ ಸಲ್ಲಿಸಿರುವಲ್ಲಿ ಮತ್ತು,–

(ಎ) ಬೇರೊಂದು ವಸ್ತುವಿನ ಸಂಬಂಧದಲ್ಲಿ ಮತ್ತೊಬ್ಬ ವ್ಯಕ್ತಿಯು ಈ ಹಿಂದೆ ವಿನ್ಯಾಸವನ್ನು ನೋಂದಾಯಿಸಿರಲಿ; ಅಥವಾ

(ಬಿ) ಅರ್ಜಿಗೆ ಸಂಬಂಧಿಸಿದ ವಿನ್ಯಾಸವು, ಅದರ ಸ್ವರೂಪವನ್ನು ಬದಲಿಸಲು ಅಥವಾ ಅದರ ಗುರುತನ್ನು ಗಮನಾರ್ಹವಾಗಿ ಬಾಧಿಸಲು ಸಾಕಷ್ಟಾಗಿರದಂಥ ಮಾರ್ಪಾಟುಗಳೊಂದಿಗೆ ಅಥವಾ ವ್ಯತ್ಯಾಸಗಳೊಂದಿಗೆ ಅದೇ ಅಥವಾ ಬೇರೊಂದು ವಸ್ತುವಿನ ಸಂಬಂಧದಲ್ಲಿ ಮತ್ತೊಬ್ಬ ವ್ಯಕ್ತಿಯು ಈ ಹಿಂದೆ ನೋಂದಾಯಿಸಿರುವ ವಿನ್ಯಾಸವನ್ನು ಒಳಗೊಂಡಿರಲಿ

– ಆಗ ಅರ್ಜಿಯು ಇತ್ಯರ್ಥದಲ್ಲಿರುವ ಯಾವುದೇ ಸಮಯದಲ್ಲಿ ಅರ್ಜಿದಾರನು ಈ ಹಿಂದೆ ನೋಂದಾಯಿಸಿದ ವಿನ್ಯಾಸದ ಮಾಲೀಕನಾದರೆ, ಈ ಪ್ರಕರಣದ ಹಿಂದೆ ಹೇಳಿದ ಉಪಬಂಧಗಳು ಅರ್ಜಿಯನ್ನು ಸಲ್ಲಿಸುವ ಸಮಯದಲ್ಲಿ ಅರ್ಜಿದಾರನು ಆ ವಿನ್ಯಾಸದ ನೋಂದಾಯಿತ ಮಾಲೀಕನಾಗಿದ್ದರೆ ಹೇಗೋ ಹಾಗೆ ಅನ್ವಯಿಸತಕ್ಕದ್ದು.

**7. ನೋಂದಾಯಿತ ವಿನ್ಯಾಸಗಳ ವಿವರಗಳ ಪ್ರಕಟಣೆ.–** ನಿಯಂತ್ರಕನು, ವಿನ್ಯಾಸದ ನೋಂದಣಿಯಾದ ನಂತರ ಆದಷ್ಟು ಬೇಗನೆ ಪ್ರಕಟಿಸಬೇಕಾದ ವಿನ್ಯಾಸದ ನಿಯಮಿಸಿದ ವಿವರಗಳನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ಪ್ರಕಟಿಸುವ ವ್ಯವಸ್ಥೆ ಮಾಡಿಸತಕ್ಕದ್ದು ಮತ್ತು ತದನಂತರ ವಿನ್ಯಾಸವು ಸಾರ್ವಜನಿಕರ ಪರಿಶೀಲನೆಗೆ ಮುಕ್ತವಾಗಿರತಕ್ಕದ್ದು.

**8. ಅರ್ಜಿಯನ್ನು ಬದಲಿಯಾಗಿ ಮುಂದುವರೆಸುವುದು, ಇತ್ಯಾದಿಗಳ ಸಂಬಂಧದಲ್ಲಿ ಆದೇಶಗಳನ್ನು ಹೊರಡಿಸಲು ನಿಯಂತ್ರಕನ ಅಧಿಕಾರ.–** (1) ವಿನ್ಯಾಸವನ್ನು ನೋಂದಣಿ ಮಾಡುವುದಕ್ಕೆ ಮುಂಚೆ ಯಾವುದೇ ಕಾಲದಲ್ಲಿ ನಿಯಮಿಸಿದ ರೀತಿಯಲ್ಲಿ ಮಾಡಲಾದ ಕ್ಲೇಮಿನ ಸಂಬಂಧದಲ್ಲಿ ನಿಯಂತ್ರಕನಿಗೆ ವಿನ್ಯಾಸದ ನೋಂದಣಿಗಾಗಿ ಅರ್ಜಿದಾರನು ಅಥವಾ ಅರ್ಜಿದಾರರಲ್ಲಿ ಒಬ್ಬನು ಲಿಖಿತದಲ್ಲಿ ಮಾಡಿದ ಯಾವುದೇ ಹಸ್ತಾಂತರಣದ ಅಥವಾ ಒಪ್ಪಂದದ ಕಾರಣದಿಂದಾಗಿ ಅಥವಾ ಕಾನೂನಿನ ಪ್ರವರ್ತನೆಯಿಂದಾಗಿ ಕ್ಲೇಮುದಾರನು, ವಿನ್ಯಾಸವನ್ನು ಈ ಹಿಂದೆಯೇ ನೋಂದಣಿ ಮಾಡಿದ್ದಿದ್ದರೆ, ಅದಕ್ಕೆ ಅಥವಾ ಅದರಲ್ಲಿ ಅರ್ಜಿದಾರನು ಹೊಂದಿರುವ ಹಿತಾಸಕ್ತಿಗೆ ಅಥವಾ ವಿನ್ಯಾಸದ ಅಥವಾ ಅದರ ಹಿತಾಸಕ್ತಿಯ ಅವಿಭಕ್ತ ಪಾಲಿಗೆ ಹಕ್ಕುಳ್ಳವನಾಗಿರುತ್ತಿದ್ದನೆಂದು ಮನದಟ್ಟಾದರೆ, ನಿಯಂತ್ರಕನು, ಸಂದರ್ಭವು ಅಗತ್ಯಪಡಿಸಬಹುದಾದಂತೆ ತದನುಸಾರವಾಗಿ ಈ ಪ್ರಕರಣದ ಉಪಬಂಧಗಳಿಗೊಳಪಟ್ಟು, ಅರ್ಜಿಯು ಕ್ಲೇಮುದಾರನ ಹೆಸರಿನಲ್ಲಿ ಅಥವಾ ಕ್ಲೇಮುದಾರರ ಮತ್ತು ಅರ್ಜಿದಾರನ ಅಥವಾ ಇತರ ಜಂಟಿ ಅರ್ಜಿದಾರನ ಅಥವಾ ಅರ್ಜಿದಾರರ ಹೆಸರುಗಳಲ್ಲಿ ಮುಂದುವರೆಯತಕ್ಕದ್ದೆಂದು ನಿರ್ದೇಶಿಸಬಹುದು.

(2) ಇತರ ಜಂಟಿ ಅರ್ಜಿದಾರನ ಅಥವಾ ಅರ್ಜಿದಾರರ ಸಮ್ಮತಿಯ ಹೊರತಾಗಿ ವಿನ್ಯಾಸದ ನೋಂದಣಿಗಾಗಿ ಇಬ್ಬರು ಅಥವಾ ಹೆಚ್ಚು ಜಂಟಿ ಅರ್ಜಿದಾರರಲ್ಲಿ ಒಬ್ಬನು ಮಾಡಿದ ಯಾವುದೇ ಹಸ್ತಾಂತರಣದ ಅಥವಾ ಒಪ್ಪಂದದ ಕಾರಣದ ಮೇಲೆ ಹೇಳಿದಂತೆ ಯಾವ ನಿರ್ದೇಶನವನ್ನೂ ನೀಡತಕ್ಕದ್ದಲ್ಲ.

(3) ಮೇಲೆ ಹೇಳಿದಂಥ ಯಾವ ನಿರ್ದೇಶನವನ್ನೂ,–

(ಎ) ನೋಂದಣಿಗಾಗಿ ಸಲ್ಲಿಸಿದ ಅರ್ಜಿಯ ಸಂಖ್ಯೆಯನ್ನು ಉಲ್ಲೇಖಿಸಿ ಅದರಲ್ಲಿನ ವಿನ್ಯಾಸವನ್ನು ಗುರುತಿಸಿದ್ದ ಹೊರತು; ಅಥವಾ

(ಬಿ) ಯಾವ ವಿನ್ಯಾಸಕ್ಕೆ ಸಂಬಂಧಿಸಿದಂತೆ ಅರ್ಜಿಯನ್ನು ಸಲ್ಲಿಸಲಾಗಿದೆಯೋ ಆ ವಿನ್ಯಾಸಕ್ಕೆ ಹಸ್ತಾಂತರಣವು ಅಥವಾ ಒಪ್ಪಂದವು ಸಂಬಂಧಿಸುತ್ತದೆಂದು ಯಾರು ಹಸ್ತಾಂತರಣವನ್ನು ಅಥವಾ ಒಪ್ಪಂದವನ್ನು ಮಾಡಿಕೊಂಡಿದ್ದಾರೋ ಆ ವ್ಯಕ್ತಿಯು ನಿಯಂತ್ರಕನಿಗೆ ಒಂದು ಸ್ವೀಕೃತಿ ಪತ್ರವನ್ನು ಹಾಜರುಪಡಿಸಿದ್ದ ಹೊರತು; ಅಥವಾ

(ಸಿ) ವಿನ್ಯಾಸದ ಸಂಬಂಧದಲ್ಲಿ ಕ್ಲೇಮುದಾರನ ಹಕ್ಕುಗಳು ನ್ಯಾಯಾಲಯದ ತೀರ್ಮಾನದಿಂದ ಅಂತಿಮವಾಗಿ ಸುಸ್ಥಾಪಿತವಾಗಿದ್ದ ಹೊರತು; ಅಥವಾ

(ಡಿ) (5)ನೇ ಉಪಪ್ರಕರಣದ ಮೇರೆಗೆ ಅರ್ಜಿಯನ್ನು ಮುಂದುವರೆಸಲು ಅಥವಾ ಅದನ್ನು ಯಾವ ರೀತಿಯಲ್ಲಿ ಮುಂದುವರಿಸತಕ್ಕದ್ದೆಂಬುದನ್ನು ವಿನಿಯಮಿಸಲು ಅನುಕೂಲವಾಗುವಂತೆ ನಿಯಂತ್ರಕನು ನಿರ್ದೇಶನಗಳನ್ನು ನೀಡಿರುವ ಹೊರತು

– ವಿನ್ಯಾಸದ ಪ್ರಯೋಜನದ ಹಸ್ತಾಂತರಣಕ್ಕಾಗಿ ಮಾಡಿದ ಯಾವುದೇ ಹಸ್ತಾಂತರಣದ ಅಥವಾ ಒಪ್ಪಂದದ ಕಾರಣದಿಂದಾಗಿ ನೀಡತಕ್ಕದ್ದಲ್ಲ.

(4) ವಿನ್ಯಾಸದ ನೋಂದಣಿಗಾಗಿ ಅರ್ಜಿ ಸಲ್ಲಿಸಿದ್ದ ಇಬ್ಬರಲ್ಲಿ ಅಥವಾ ಹೆಚ್ಚು ಜಂಟಿ ಅರ್ಜಿದಾರರಲ್ಲಿ, ಒಬ್ಬನು ವಿನ್ಯಾಸವನ್ನು ನೋಂದಣಿ ಮಾಡುವ ಮೊದಲೇ ಯಾವುದೇ ಕಾಲದಲ್ಲಿ ಮರಣ ಹೊಂದಿದರೆ, ನಿಯಂತ್ರಕನು, ಬದುಕಿರುವವನು ಅಥವಾ ಬದುಕಿರುವವರು ಈ ಸಂಬಂಧದಲ್ಲಿ ಮಾಡಿಕೊಂಡ ಒಂದು ಕೋರಿಕೆಯ ಮೇಲೆ ಮತ್ತು ಮೃತ ವ್ಯಕ್ತಿಯ ಕಾನೂನು ಸಮ್ಮತ ಪ್ರತಿನಿಧಿಯ ಸಮ್ಮತಿಯನ್ನು ಪಡೆದು, ಬದುಕಿರುವವನ ಅಥವಾ ಬದುಕಿರುವವರ ಹೆಸರಿನಲ್ಲಿ ಮಾತ್ರ ಅರ್ಜಿಯನ್ನು ಮುಂದುವರಿಸಲು ನಿರ್ದೇಶಿಸಬಹುದು.

(5) ವಿನ್ಯಾಸದ ನೋಂದಣಿಯ ಸಂಬಂಧದಲ್ಲಿ ಅರ್ಜಿಯನ್ನು ಮುಂದುವರೆಸಬೇಕೆ ಅಥವಾ ಯಾವ ರೀತಿಯಲ್ಲಿ ಮುಂದುವರಿಸಬೇಕು ಎಂಬ ಬಗ್ಗೆ ಜಂಟಿ ಅರ್ಜಿದಾರರ ನಡುವೆ ಯಾವುದೇ ವಿವಾದವು ಉಂಟಾದರೆ, ನಿಯಂತ್ರಕನು, ಯಾರೇ ಪಕ್ಷಕಾರರು ನಿಯಮಿಸಿದ ರೀತಿಯಲ್ಲಿ ತನಗೆ ಅರ್ಜಿ ಸಲ್ಲಿಸಿದ ನಂತರ, ಮತ್ತು ಸಂಬಂಧಪಟ್ಟ ಎಲ್ಲ ಪಕ್ಷಕಾರರಿಗೆ ತಮ್ಮ ಅಹವಾಲನ್ನು ಹೇಳಿಕೊಳ್ಳಲು ಅವಕಾಶ ನೀಡಿದ ನಂತರ, ಒಬ್ಬ ಅಥವಾ ಹೆಚ್ಚು ಪಕ್ಷಕಾರರ ಹೆಸರಿನಲ್ಲಿ ಮಾತ್ರ ಅರ್ಜಿಯನ್ನು ಮುಂದುವರಿಸಲು ಅಥವಾ ಅದನ್ನು ಯಾವ ರೀತಿ ಮುಂದುವರೆಸಬೇಕೆಂಬುದನ್ನು ವಿನಿಯಮಿಸಲು ಅನುಕೂಲವಾಗುವಂತೆ ಅಥವಾ ಆ ಎರಡೂ ಉದ್ದೇಶಗಳಿಗಾಗಿ ಸಂದರ್ಭವು ಅಗತ್ಯಪಡಿಸಬಹುದಾದ ರೀತಿಯಲ್ಲಿ ತಾನು ಸೂಕ್ತವೆಂದು ಭಾವಿಸುವಂಥ ನಿರ್ದೇಶನಗಳನ್ನು ನೀಡಬಹುದು.

**9. ನೋಂದಣಿ ಪ್ರಮಾಣ ಪತ್ರ.–** (1) ನಿಯಂತ್ರಕನು, ವಿನ್ಯಾಸವನ್ನು ನೋಂದಣಿ ಮಾಡಿದಾಗ, ಅದರ ಮಾಲೀಕನಿಗೆ ನೋಂದಣಿಯ ಪ್ರಮಾಣಪತ್ರವನ್ನು ಮಂಜೂರು ಮಾಡತಕ್ಕದ್ದು.

(2) ನಿಯಂತ್ರಕನು, ಮೂಲ ಪ್ರಮಾಣಪತ್ರವು ಕಳೆದುಹೋದ ಸಂದರ್ಭದಲ್ಲಿ ಅಥವಾ ಅವನು ಅವಶ್ಯವೆಂದು ಭಾವಿಸುವಂಥ ಇತರೆ ಯಾವುದೇ ಸಂದರ್ಭದಲ್ಲಿ, ಪ್ರಮಾಣಪತ್ರದ ಒಂದು ಅಥವಾ ಹೆಚ್ಚು ಪ್ರತಿಗಳನ್ನು ಒದಗಿಸಬಹುದು.

**10. ವಿನ್ಯಾಸಗಳ ರಿಜಿಸ್ಟರು.–** (1) ವಿನ್ಯಾಸಗಳ ರಿಜಿಸ್ಟರು ಎಂದು ಕರೆಯಲಾಗುವ ಒಂದು ಪುಸ್ತಕವನ್ನು ಪೇಟೆಂಟ್ ಕಚೇರಿಯಲ್ಲಿಟ್ಟಿರತಕ್ಕದ್ದು, ನೋಂದಾಯಿಸಿದ ವಿನ್ಯಾಸಗಳ ಮಾಲೀಕರ ಹೆಸರುಗಳನ್ನು ಮತ್ತು ವಿಳಾಸಗಳನ್ನು, ನೋಂದಾಯಿಸಿದ ವಿನ್ಯಾಸಗಳ ಹಸ್ತಾಂತರಣಗಳ ಮತ್ತು ವರ್ಗಾವಣೆಗಳ ಅಧಿಸೂಚನೆಗಳನ್ನು ಮತ್ತು ನಿಯಮಿಸಬಹುದಾದಂಥ ಇತರೆ ವಿಷಯಗಳನ್ನು ಅದರಲ್ಲಿ ದಾಖಲು ಮಾಡತಕ್ಕದ್ದು ಮತ್ತು ನಿಯಮಿಸಬಹುದಾದಂಥ ಸುರಕ್ಷತೆಗಳಿಗೊಳಪಟ್ಟು ಅಂಥ ರಿಜಿಸ್ಟರನ್ನು ಪೂರ್ಣವಾಗಿ ಅಥವಾ ಭಾಗಶಃವಾಗಿ ಗಣಕಯಂತ್ರದ ಫ್ಲಾಪಿಗಳಲ್ಲಿ ಅಥವಾ ಡಿಸ್ಕೆಟ್‌ಗಳಲ್ಲಿ ಇಟ್ಟುಕೊಂಡು ಬರಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ಪೂರ್ಣವಾಗಿ ಅಥವಾ ಭಾಗಶಃ ಗಣಕಯಂತ್ರದ ಫ್ಲಾಪಿಗಳಲ್ಲಿ ಅಥವಾ ಡಿಸ್ಕೆಟ್‌ಗಳಲ್ಲಿ ರಿಜಿಸ್ಟರನ್ನು ಇಟ್ಟುಕೊಂಡಿರುವಾಗ, ರಿಜಿಸ್ಟರಿನ ಯಾವುದೇ ನಮೂದಿಗೆ ಈ ಅಧಿನಿಯಮದಲ್ಲಿ ಮಾಡಿದ ಯಾವುದೇ ಉಲ್ಲೇಖವನ್ನು ಗಣಕಯಂತ್ರದ ಫ್ಲಾಪಿಗಳಲ್ಲಿ ಅಥವಾ ಡಿಸ್ಕೆಟ್‌ಗಳಲ್ಲಿ ಹಾಗೆ ಇಟ್ಟುಕೊಂಡು ಬರಲಾದ ನಮೂದಿಗೆ ಮಾಡಲಾದ ಉಲ್ಲೇಖಗಳೆಂಬಂತೆ ಅರ್ಥೈಸತಕ್ಕದ್ದು.

(3) ಈ ಅಧಿನಿಯಮದ ಪ್ರಾರಂಭದಲ್ಲಿ ಅಸ್ತಿತ್ವದಲ್ಲಿದ್ದ ವಿನ್ಯಾಸಗಳ ರಿಜಿಸ್ಟರನ್ನು ಈ ಅಧಿನಿಯಮದ ಅಡಿಯಲ್ಲಿನ ವಿನ್ಯಾಸಗಳ ರಿಜಿಸ್ಟರಿನೊಂದಿಗೆ ಸೇರ್ಪಡೆ ಮಾಡತಕ್ಕದ್ದು ಮತ್ತು ಅದು ಆ ರಿಜಿಸ್ಟರಿನ ಭಾಗವಾಗಿರತಕ್ಕದ್ದು.

(4) ವಿನ್ಯಾಸಗಳ ರಿಜಿಸ್ಟ್ರರು ಈ ಅಧಿನಿಯಮದ ಮೂಲಕ ಅದರಲ್ಲಿ ನಮೂದಿಸಬೇಕೆಂದು ನಿರ್ದೇಶಿಸಲಾದ ಅಥವಾ ಅಧಿಕೃತಗೊಳಿಸಲಾದ ಯಾವುದೇ ವಿಷಯದ ಮೇಲ್ನೋಟದ ಸಾಕ್ಷ್ಯವಾಗಿರತಕ್ಕದ್ದು.

## ಅಧ್ಯಾಯ –III

### ನೋಂದಾಯಿತ ವಿನ್ಯಾಸಗಳಲ್ಲಿ ಕೃತಿಸ್ವಾಮ್ಯ

**11. ನೋಂದಣಿಯಾದಾಗ ಕೃತಿಸ್ವಾಮ್ಯ.–** (1) ವಿನ್ಯಾಸವನ್ನು ನೋಂದಾಯಿಸಿದಾಗ, ವಿನ್ಯಾಸದ ನೋಂದಾಯಿತ ಮಾಲೀಕನು, ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ನೋಂದಣಿಯ ದಿನಾಂಕದಿಂದ ಹತ್ತು ವರ್ಷಗಳ ಅವಧಿಗೆ ವಿನ್ಯಾಸದ ಕೃತಿಸ್ವಾಮ್ಯವನ್ನು ಹೊಂದಿರತಕ್ಕದ್ದು.

(2) ಸದರಿ ಹತ್ತು ವರ್ಷಗಳು ಮುಕ್ತಾಯವಾಗುವುದಕ್ಕೆ ಮುಂಚೆ, ಕೃತಿಸ್ವಾಮ್ಯದ ಅವಧಿಯ ವಿಸ್ತರಣೆಗಾಗಿ ನಿಯಮಿಸಿದ ರೀತಿಯಲ್ಲಿ ನಿಯಂತ್ರಕನಿಗೆ ಅರ್ಜಿ ಸಲ್ಲಿಸಿದರೆ ನಿಯಮಿಸಿದ ಫೀಜನ್ನು ಪಾವತಿ ಮಾಡಿದ ಮೇಲೆ, ನಿಯಂತ್ರಕನು, ಹತ್ತು ವರ್ಷಗಳ ಮೂಲ ಅವಧಿಯು ಮುಕ್ತಾಯವಾದಾಗಿನಿಂದ ಐದು ವರ್ಷಗಳ ಎರಡನೆಯ ಅವಧಿಯವರೆಗೆ ಕೃತಿಸ್ವಾಮ್ಯದ ಅವಧಿಯನ್ನು ವಿಸ್ತರಿಸತಕ್ಕದ್ದು.

**12. ರದ್ದಾದ ವಿನ್ಯಾಸಗಳನ್ನು ಪೂರ್ವಸ್ಥಿತಿಗೆ ತರುವುದು.–** (1) 11ನೆಯ ಪ್ರಕರಣದ (2)ನೆಯ ಉಪಪ್ರಕರಣದ ಮೇರೆಗೆ ಕೃತಿ ಸ್ವಾಮ್ಯದ ವಿಸ್ತರಣೆಗಾಗಿ ಫೀಜನ್ನು ಪಾವತಿಸಲು ತಪ್ಪಿದ ಕಾರಣದಿಂದಾಗಿ ವಿನ್ಯಾಸವು ಪರಿಣಾಮ ಹೊಂದಿರುವುದು ನಿಂತು ಹೋಗಿರುವಾಗ, ಅಂಥ ವಿನ್ಯಾಸದ ಮಾಲೀಕನು ಅಥವಾ ಅವನ ಕಾನೂನುಸಮ್ಮತ ಪ್ರತಿನಿಧಿಯು ಮತ್ತು ವಿನ್ಯಾಸವನ್ನು ಇಬ್ಬರು ಅಥವಾ ಹೆಚ್ಚು ವ್ಯಕ್ತಿಗಳು ಜಂಟಿಯಾಗಿ ಧಾರಣ ಮಾಡಿದ್ದರೆ ಆಗ ನಿಯಂತ್ರಕನ ಅನುಮತಿ ಪಡೆದು ಅವರಲ್ಲಿ ಒಬ್ಬರು ಅಥವಾ ಹೆಚ್ಚು ವ್ಯಕ್ತಿಗಳು, ಇತರರನ್ನು ಸೇರಿಸಿಕೊಳ್ಳದೆ ವಿನ್ಯಾಸವು ಪರಿಣಾಮ ಹೊಂದಿರುವುದು ನಿಂತುಹೋದ ದಿನಾಂಕದಿಂದ ಒಂದು ವರ್ಷದೊಳಗಾಗಿ, ನಿಯಮಿಸಬಹುದಾದಂಥ ಫೀಜನ್ನು ಪಾವತಿ ಮಾಡಿ ನಿಯಮಿಸಿದ ರೀತಿಯಲ್ಲಿ ವಿನ್ಯಾಸದ ಪೂರ್ವಸ್ಥಿತಿ ಸ್ಥಾಪನೆಗೆ ಅರ್ಜಿ ಸಲ್ಲಿಸಬಹುದು.

(2) ಈ ಪ್ರಕರಣದ ಮೇರೆಗೆ ಸಲ್ಲಿಸಿದ ಅರ್ಜಿಯು, ನಿಯಮಿಸಲಾದ ಫೀಜನ್ನು ಪಾವತಿ ಮಾಡುವುದಕ್ಕೆ ತಪ್ಪಲು ಕಾರಣವಾದ ಸನ್ನಿವೇಶದ ಪೂರ್ಣ ಮಾಹಿತಿ ನೀಡುವ ನಿಯಮಿಸಲಾದ ರೀತಿಯಲ್ಲಿ ಸತ್ಯಾಪನೆ ಮಾಡಿದ ವಿವರಣೆಯನ್ನು ಹೊಂದಿರತಕ್ಕದ್ದು ಮತ್ತು ನಿಯಂತ್ರಕನು, ತಾನು ಅವಶ್ಯವೆಂದು ಭಾವಿಸಬಹುದಾದಂಥ ಇನ್ನೂ ಹೆಚ್ಚಿನ ಸಾಕ್ಷ್ಯವನ್ನು ಅರ್ಜಿದಾರನಿಂದ ಪಡೆಯಬಹುದು.

**13. ರದ್ದಾದ ವಿನ್ಯಾಸಗಳನ್ನು ಪೂರ್ವಸ್ಥಿತಿಗೆ ತರುವುದಕ್ಕಾಗಿ ಸಲ್ಲಿಸಿದ ಅರ್ಜಿಗಳನ್ನು ವಿಲೆ ಮಾಡುವ ಕಾರ್ಯವಿಧಾನ.–** (1) ಅರ್ಜಿದಾರನು ತನ್ನ ಅಹವಾಲನ್ನು ಕೇಳಬೇಕೆಂದು ಇಚ್ಛಿಸಿದರೆ ಅಥವಾ ಅವನ ಅಹವಾಲನ್ನು ಕೇಳುವುದು ಸೂಕ್ತವೆಂದು ನಿಯಂತ್ರಕನು ಭಾವಿಸಿದರೆ, ಅವನ ಅಹವಾಲನ್ನು ಕೇಳಿದ ತರುವಾಯ ಕೃತಿಸ್ವಾಮ್ಯದ ಅವಧಿಯ ವಿಸ್ತರಣೆಗಾಗಿ ಫೀಜನ್ನು ಸಂದಾಯ ಮಾಡಲು ವಿಫಲನಾಗಿರುವುದು ಉದ್ದೇಶಪೂರ್ವಕವಾಗಿರಲಿಲ್ಲವೆಂದು ಮತ್ತು ಅರ್ಜಿಯನ್ನು ಸಲ್ಲಿಸುವಲ್ಲಿ ಅನುಚಿತ ವಿಳಂಬವಾಗಿರಲಿಲ್ಲವೆಂದು ನಿಯಂತ್ರಕನಿಗೆ ಮನದಟ್ಟಾದರೆ, ನಿಯಂತ್ರಕನು, ಕೃತಿಸ್ವಾಮ್ಯದ ಅವಧಿಯ ವಿಸ್ತರಣೆಗಾಗಿ ಪಾವತಿ ಮಾಡಿಲ್ಲದ ಯಾವುದೇ ಫೀಜನ್ನು ನಿಯಮಿಸಲಾದ ಹೆಚ್ಚಿನ ಫೀಜಿನೊಂದಿಗೆ ಸಂದಾಯ ಮಾಡಿದ ಮೇಲೆ ವಿನ್ಯಾಸದ ನೋಂದಣಿಯನ್ನು ಪೂರ್ವಸ್ಥಿತಿಗೆ ತರತಕ್ಕದ್ದು.

(2) ನಿಯಂತ್ರಕನು, ವಿನ್ಯಾಸವನ್ನು ಪೂರ್ವಸ್ಥಿತಿಗೆ ತರುವ ಒಂದು ಷರತ್ತಾಗಿ ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಯಾವುದೇ ದಸ್ತಾವೇಜಿನ ಅಥವಾ ವಿಷಯದ ರಿಜಿಸ್ಟರಿನಲ್ಲಿ ಯಾವ ನಮೂದನ್ನು ಮಾಡಬೇಕಾಗಿತ್ತೋ, ಆದರೆ ಹಾಗೆ ನಮೂದು ಮಾಡಿಲ್ಲವೋ ಆ ಯಾವುದೇ ನಮೂದನ್ನು ರಿಜಿಸ್ಟರಿನಲ್ಲಿ ನಮೂದು ಮಾಡುವುದು ಅವಶ್ಯವೆಂದು ಅವನು ಭಾವಿಸಿದರೆ ಹಾಗೆ ರಿಜಿಸ್ಟರಿನಲ್ಲಿ ನಮೂದು ಮಾಡುವಂತೆ ಅಗತ್ಯಪಡಿಸಬಹುದು.

**14. ರದ್ದಾದ ವಿನ್ಯಾಸವನ್ನು ಪೂರ್ವಸ್ಥಿತಿಗೆ ತಂದಾಗ ಮಾಲೀಕನ ಹಕ್ಕುಗಳು.–** (1) ವಿನ್ಯಾಸದ ನೋಂದಣಿಯನ್ನು ಪೂರ್ವಸ್ಥಿತಿಗೆ ತಂದಿರುವಲ್ಲಿ, ನೋಂದಾಯಿತ ಮಾಲೀಕನ ಹಕ್ಕುಗಳು, ನಿಯಮಿಸಬಹುದಾದಂಥ ಉಪಬಂಧಗಳಿಗೆ ಮತ್ತು ವಿನ್ಯಾಸದ ನೋಂದಣಿಯು ಜಾರಿಯಲ್ಲಿರುವುದು ನಿಂತು ಹೋದ ದಿನಾಂಕದ ಮತ್ತು ವಿನ್ಯಾಸದ ನೋಂದಣಿಯನ್ನು ಪೂರ್ವಸ್ಥಿತಿಗೆ ತಂದ ದಿನಾಂಕದ ನಡುವೆ ವಿನ್ಯಾಸವನ್ನು ಬಳಸುವ ಪ್ರಯೋಜನವನ್ನು ತಾವು ಪಡೆಯಲು ಕರಾರು ಮೂಲಕ ಅಥವಾ ಅನ್ಯಥಾ ತಾವು ಪಡೆಯಲು ಪ್ರಾರಂಭಿಸಿರುವ ಅಥವಾ ನಿಶ್ಚಿತ ಕ್ರಮ ಕೈಗೊಂಡಿರುವ ವ್ಯಕ್ತಿಗಳ ರಕ್ಷಣೆಗಾಗಿ ಅಥವಾ ನಷ್ಟ ಪರಿಹಾರಕ್ಕಾಗಿ ನಿಯಂತ್ರಕನು ವಿಧಿಸುವುದು ಸೂಕ್ತವೆಂದು ಭಾವಿಸುವಂಥ ಇತರೆ ಉಪಬಂಧಗಳಿಗೆ ಒಳಪಟ್ಟಿರತಕ್ಕದ್ದು.

(2) ವಿನ್ಯಾಸದ ನೋಂದಣಿಯು ಜಾರಿಯಲ್ಲಿರುವುದು ನಿಂತುಹೋದ ದಿನಾಂಕದ ಮತ್ತು ವಿನ್ಯಾಸವನ್ನು ಪೂರ್ವಸ್ಥಿತಿಗೆ ತಂದ ದಿನಾಂಕದ ನಡುವೆ ಮಾಡಲಾದ ನೋಂದಾಯಿತ ವಿನ್ಯಾಸದ ಚೌರ್ಯದ ಅಥವಾ ಅಂಥ ವಿನ್ಯಾಸದಲ್ಲಿನ ಕೃತಿಸ್ವಾಮ್ಯದ ಉಲ್ಲಂಘನೆಯ ಸಂಬಂಧದಲ್ಲಿ ಯಾವುದೇ ದಾವೆಯನ್ನು ಅಥವಾ ಇತರೆ ವ್ಯವಹರಣೆಯನ್ನು ಪ್ರಾರಂಭಿಸತಕ್ಕದ್ದಲ್ಲ.

**15. ಮಾರಾಟವಾದ ಮೇಲೆ ವಶಾವಣೆ ಮಾಡುವ ಮುಂಚೆ ಅಗತ್ಯತೆಗಳು.–** (1) ಯಾವ ವಸ್ತುಗಳಿಗೆ ನೋಂದಾಯಿತ ವಿನ್ಯಾಸವನ್ನು ಬಳಸಲಾಗಿದೆಯೋ ಆ ಯಾವುವೇ ವಸ್ತುಗಳನ್ನು ಮಾರಾಟ ಮಾಡಿದ ಮೇಲೆ, ಅವುಗಳನ್ನು ವಶಾವಣೆ ಮಾಡುವುದಕ್ಕೆ ಮುಂಚೆ, ಮಾಲೀಕನು,–

(ಎ) (ನೋಂದಣಿಗಾಗಿ ಸಲ್ಲಿಸಿದ ಅರ್ಜಿಯಲ್ಲಿ ಖಚಿತವಾದ ನಿರೂಪಣೆಗಳನ್ನು ಅಥವಾ ಮಾದರಿಗಳನ್ನು ಒದಗಿಸಿರದಿದ್ದರೆ) ನಿಯಂತ್ರಕನಿಗೆ ನಿಯಮಿಸಲಾದ ಸಂಖ್ಯೆಯಷ್ಟು ವಿನ್ಯಾಸದ ಖಚಿತ ನಿರೂಪಣೆಗಳನ್ನು ಅಥವಾ ಮಾದರಿಗಳನ್ನು ಒದಗಿಸತಕ್ಕದ್ದು; ಮತ್ತು ಅವನು ಹಾಗೆ ಮಾಡಲು ವಿಫಲನಾದರೆ, ನಿಯಂತ್ರಕನು ಆ ಸಂಬಂಧವಾಗಿ ಮಾಲೀಕನಿಗೆ ನೋಟೀಸು ನೀಡಿದ ನಂತರ, ರಿಜಿಸ್ಟರಿನಿಂದ ಅವನ ಹೆಸರನ್ನು ಅಳಿಸಿ ಹಾಕಬಹುದು ಮತ್ತು ಅನಂತರ ವಿನ್ಯಾಸದಲ್ಲಿನ ಕೃತಿಸ್ವಾಮ್ಯವು ನಿಂತು ಹೋಗತಕ್ಕದ್ದು; ಮತ್ತು

(ಬಿ) ವಿನ್ಯಾಸವು ನೋಂದಾಯಿತವಾಗಿದೆ ಎಂದು ಸೂಚಿಸಿ ಅಂಥ ಪ್ರತಿಯೊಂದು ವಸ್ತುವಿನ ಮೇಲೆ ನಿಯಮಿಸಲಾದ ಗುರುತನ್ನು ಹಾಕುವಂತೆ ಅಥವಾ ನಿಯಮಿಸಲಾದ ಪದಗಳನ್ನು ಅಥವಾ ಅಂಕಿಗಳನ್ನು ಹಾಕುವಂತೆ ಮಾಡತಕ್ಕದ್ದು; ಮತ್ತು ಅವನು ಹಾಗೆ ಮಾಡಲು ವಿಫಲನಾದರೆ, ವಸ್ತುವಿಗೆ ಗುರುತು ಮಾಡಲು ಎಲ್ಲ ಸೂಕ್ತ ಕ್ರಮಗಳನ್ನು ಕೈಗೊಂಡಿದ್ದೆನೆಂದು ತೋರಿಸಿದ ಹೊರತು ಅಥವಾ ಅದರ ದೋಷಿಯಾದ ವ್ಯಕ್ತಿಯು ವಿನ್ಯಾಸದಲ್ಲಿ ಕೃತಿಸ್ವಾಮ್ಯದ ಅಸ್ತಿತ್ವದ ಬಗ್ಗೆ ತಿಳಿದ ನಂತರ ಅಥವಾ ನೋಟೀಸನ್ನು ಸ್ವೀಕರಿಸಿದ ನಂತರ ಉಲ್ಲಂಘನೆಯಾಗಿದೆಯೆಂದು ಅವನು ತೋರಿಸಿದ ಹೊರತು, ಮಾಲೀಕನು ವಿನ್ಯಾಸದಲ್ಲಿನ ಅವನ ಕೃತಿಸ್ವಾಮ್ಯದ ಯಾವುದೇ ಉಲ್ಲಂಘನೆಯ ಸಂಬಂಧದಲ್ಲಿ ಯಾವುದೇ ದಂಡವನ್ನು ಅಥವಾ ಹಾನಿಯನ್ನು ವಸೂಲು ಮಾಡುವುದಕ್ಕೆ ಹಕ್ಕುಳ್ಳವನಾಗಿರತಕ್ಕದ್ದಲ್ಲ.

(2) ವ್ಯಾಪಾರಿ ವರ್ಗದ ಅಥವಾ ಕೈಗಾರಿಕೆಯ ಹಿತಾಸಕ್ತಿಯಲ್ಲಿ ವಸ್ತುಗಳ ಯಾವುದೇ ವರ್ಗ ಅಥವಾ ವರ್ಣನೆಯ ಸಂಬಂಧದಲ್ಲಿ ಈ ಪ್ರಕರಣದ ಮೇರೆಗೆ ಗುರುತು ಮಾಡುವ ಬಗೆಗಿನ ಯಾವುವೇ ಅಗತ್ಯತೆಗಳನ್ನು ಬಿಟ್ಟುಬಿಡಬೇಕೆಂಬ ಅಥವಾ ಮಾರ್ಪಡಿಸಬೇಕೆಂಬ ಮನವಿಯನ್ನು ಯಾವುದೇ ವ್ಯಾಪಾರಿ ವರ್ಗದ ಅಥವಾ ಕೈಗಾರಿಕೆಯ ಮೂಲಕ ಅಥವಾ ಅದರ ಪರವಾಗಿ ಕೇಂದ್ರ ಸರ್ಕಾರಕ್ಕೆ ಮಾಡಿಕೊಂಡಾಗ, ಕೇಂದ್ರ ಸರ್ಕಾರವು, ಅದು ಸೂಕ್ತವೆಂದು ಭಾವಿಸಿದರೆ, ಈ ಅಧಿನಿಯಮದ ಮೇರೆಗಿನ ನಿಯಮದ ಮೂಲಕ, ವಸ್ತುಗಳ ಅಂಥ ಯಾವುದೇ ವರ್ಗದ ಅಥವಾ ವರ್ಣನೆಯ ಸಂಬಂಧದಲ್ಲಿ ಅಂಥ ಅಗತ್ಯತೆಗಳನ್ನು ಅದು ಸೂಕ್ತವೆಂದು ಭಾವಿಸುವಷ್ಟರ ಮಟ್ಟಿಗೆ ಮತ್ತು ಅಂಥ ಷರತ್ತುಗಳಿಗೊಳಪಟ್ಟು ಬಿಟ್ಟುಬಿಡಬಹುದು ಅಥವಾ ಮಾರ್ಪಡಿಸಬಹುದು.

**16. ಕೃತಿಸ್ವಾಮ್ಯವನ್ನು ಬಹಿರಂಗಪಡಿಸುವುದರ ಪರಿಣಾಮ.–** ಇತರೆ ವ್ಯಕ್ತಿಯು ವಿನ್ಯಾಸವನ್ನು ಬಳಸುವುದು ಅಥವಾ ಪ್ರಕಟಿಸುವುದು ಸದ್ಭಾವನೆಗೆ ವಿರುದ್ಧವಾಗುವ ಸಂದರ್ಭಗಳಲ್ಲಿ ವಿನ್ಯಾಸದ ಮಾಲೀಕನು ವಿನ್ಯಾಸವನ್ನು ಯಾರೇ ಇತರೆ ವ್ಯಕ್ತಿಗೆ ಬಹಿರಂಗಪಡಿಸುವುದು ಮತ್ತು ವಿನ್ಯಾಸದ ಮಾಲೀಕನ ಹೊರತು ಯಾರೇ ವ್ಯಕ್ತಿಯಿಂದ ಸದ್ಭಾವನೆಯ ಉಲ್ಲಂಘನೆಯಲ್ಲಿ ವಿನ್ಯಾಸವನ್ನು ಬಹಿರಂಗಪಡಿಸುವುದು ಮತ್ತು ನೋಂದಣಿಯ ಉದ್ದೇಶದಿಂದ ಒಂದು ಹೊಸ ಅಥವಾ ಮೂಲ ಜವಳಿ ವಿನ್ಯಾಸ ಹೊಂದಿರುವ ವಸ್ತುವಿಗಾಗಿ ಪ್ರಥಮ ಮತ್ತು ಗೌಪ್ಯ ಆದೇಶವನ್ನು ಅಂಗೀಕರಿಸುವುದು, ಬಹಿರಂಗಪಡಿಸಿದ ಅಥವಾ ಅಂಗೀಕರಿಸಿದ ತರುವಾಯ ನೋಂದಣಿಯನ್ನು ಪಡೆದಿದ್ದರೆ, ಅದರ ಕೃತಿಸ್ವಾಮ್ಯವನ್ನು ಅಸಿಂಧುಗೊಳಿಸಲು ಸಾಕಷ್ಟಾಗಿರುವ ವಿನ್ಯಾಸದ ಒಂದು ಪ್ರಕಟಣೆ ಎಂದು ಭಾವಿಸತಕ್ಕದ್ದಲ್ಲ.

**17. ನೋಂದಾಯಿತ ವಿನ್ಯಾಸಗಳ ಪರಿಶೀಲನೆ.–** (1) ವಿನ್ಯಾಸದ ಕೃತಿಸ್ವಾಮ್ಯವು ಅಸ್ತಿತ್ವದಲ್ಲಿರುವ ಅವಧಿಯಲ್ಲಿ ಯಾರೇ ವ್ಯಕ್ತಿಯು ನಿಯಂತ್ರಕನಿಗೆ ವಿನ್ಯಾಸವನ್ನು ಗುರುತಿಸುವುದಕ್ಕೆ ಸಾಧ್ಯವಾಗಬಹುದಾದ ಮಾಹಿತಿಯನ್ನು ಒದಗಿಸಿದ ಮೇಲೆ ಮತ್ತು ನಿಯಮಿಸಲಾದ ಫೀಜನ್ನು ಸಂದಾಯ ಮಾಡಿದ ನಂತರ ನಿಯಮಿಸಿದ ರೀತಿಯಲ್ಲಿ ವಿನ್ಯಾಸವನ್ನು ಪರಿಶೀಲಿಸಬಹುದು.

(2) ಯಾರೇ ವ್ಯಕ್ತಿಯು, ನಿಯಂತ್ರಕನಿಗೆ ಅರ್ಜಿ ಸಲ್ಲಿಸಿದ ತರುವಾಯ ಮತ್ತು ನಿಯಮಿಸಬಹುದಾದಂಥ ಫೀಜನ್ನು ಪಾವತಿ ಮಾಡಿದ ನಂತರ, ಯಾವುದೇ ನೋಂದಾಯಿತ ವಿನ್ಯಾಸದ ಪ್ರಮಾಣೀಕೃತ ಪ್ರತಿಯನ್ನು ಪಡೆಯಬಹುದು.

**18. ಕೃತಿಸ್ವಾಮ್ಯದ ಅಸ್ತಿತ್ವದ ಬಗ್ಗೆ ಮಾಹಿತಿ.–** ವಿನ್ಯಾಸವನ್ನು ಗುರುತಿಸುವುದಕ್ಕೆ ನಿಯಂತ್ರಕನಿಗೆ ಅನುವು ಮಾಡಿಕೊಡುವ ಮಾಹಿತಿಯನ್ನು ಒದಗಿಸಿದ ಯಾರೇ ವ್ಯಕ್ತಿಯ ಕೋರಿಕೆಯ ಮೇಲೆ ಮತ್ತು ನಿಯಮಿಸಿದ ಫೀಜನ್ನು ಪಾವತಿ ಮಾಡಿದ ನಂತರ, ನಿಯಂತ್ರಕನು ವಿನ್ಯಾಸದ ಸಂಬಂಧದಲ್ಲಿ ನೋಂದಣಿಯು ಇನ್ನೂ ಅಸ್ತಿತ್ವದಲ್ಲಿದೆಯೇ, ಮತ್ತು ಹಾಗೆ ಅಸ್ತಿತ್ವದಲ್ಲಿದ್ದರೆ ವಸ್ತುಗಳ ಯಾವ ವರ್ಗಗಳಿಗೆ ಸಂಬಂಧಪಟ್ಟಂತೆ ಅದು ಇದೆ ಎಂಬುದನ್ನು ಮತ್ತು ನೋಂದಣಿಯ ದಿನಾಂಕವನ್ನು ಮತ್ತು ನೋಂದಾಯಿತ ಮಾಲೀಕನ ಹೆಸರನ್ನು ಮತ್ತು ವಿಳಾಸವನ್ನು ಅಂಥ ವ್ಯಕ್ತಿಗೆ ತಿಳಿಸತಕ್ಕದ್ದು.

**19. ನೋಂದಣಿಯ ರದ್ದಿಯಾತಿ.–** (1) ವಿನ್ಯಾಸದ ನೋಂದಣಿಯ ನಂತರ ಯಾವುದೇ ಕಾಲದಲ್ಲಿ ನೋಂದಣಿಯ ರದ್ದಿಯಾತಿಗಾಗಿ ಯಾರೇ ಆಸಕ್ತ ವ್ಯಕ್ತಿಯು, ಈ ಮುಂದಿನ ಕಾರಣಗಳಿಗಾಗಿ ಎಂದರೆ:–

(ಎ) ಆ ವಿನ್ಯಾಸವನ್ನು ಭಾರತದಲ್ಲಿ ಈ ಮೊದಲೇ ನೋಂದಣಿ ಮಾಡಲಾಗಿದೆ; ಅಥವಾ

(ಬಿ) ನೋಂದಣಿಯ ದಿನಾಂಕಕ್ಕೆ ಮುಂಚಿತವಾಗಿಯೇ ಭಾರತದಲ್ಲಿ ಅಥವಾ ಯಾವುದೇ ಇತರೆ ದೇಶದಲ್ಲಿ ಅದನ್ನು ಪ್ರಕಟಿಸಲಾಗಿದೆ; ಅಥವಾ

(ಸಿ) ವಿನ್ಯಾಸವು ಒಂದು ಹೊಸ ಅಥವಾ ಮೂಲ ವಿನ್ಯಾಸವಾಗಿರುವುದಿಲ್ಲ; ಅಥವಾ

(ಡಿ) ವಿನ್ಯಾಸವನ್ನು ಈ ಅಧಿನಿಯಮದ ಮೇರೆಗೆ ನೋಂದಣಿ ಮಾಡಲು ಬರುವುದಿಲ್ಲ; ಅಥವಾ

(ಇ) ಇದು 2ನೇ ಪ್ರಕರಣದ (ಡಿ) ಖಂಡದ ಮೇರೆಗೆ ಪರಿಭಾಷಿಸಿರುವಂಥ ವಿನ್ಯಾಸ ಆಗಿರುವುದಿಲ್ಲ

– ಎಂಬ ಯಾವುದೇ ಕಾರಣದ ಮೇರೆಗೆ ನಿಯಂತ್ರಕನಿಗೆ ಅರ್ಜಿ ಸಲ್ಲಿಸಬಹುದು.

(2) ನಿಯಂತ್ರಕನ ಯಾವುದೇ ಆದೇಶದ ವಿರುದ್ಧ ಈ ಪ್ರಕರಣದ ಮೇರೆಗೆ ಉಚ್ಚ ನ್ಯಾಯಾಲಯಕ್ಕೆ ಅಪೀಲು ಮಾಡಬಹುದು ಮತ್ತು ನಿಯಂತ್ರಕನು ಯಾವುದೇ ಕಾಲದಲ್ಲಿ ಅಂಥ ಯಾವುದೇ ಅರ್ಜಿಯನ್ನು ಉಚ್ಚ ನ್ಯಾಯಾಲಯಕ್ಕೆ ಒಪ್ಪಿಸಬಹುದು ಮತ್ತು ಹಾಗೆ ಒಪ್ಪಿಸಲಾದ ಯಾವುದೇ ಅರ್ಜಿಯನ್ನು ಉಚ್ಚ ನ್ಯಾಯಾಲಯವು ತೀರ್ಮಾನಿಸತಕ್ಕದ್ದು.

**20. ವಿನ್ಯಾಸಗಳು ಸರ್ಕಾರಕ್ಕೆ ಬಂಧನಕಾರಿಯಾಗಿರುವುದು.–** ನೋಂದಾಯಿತ ವಿನ್ಯಾಸವು ಎಲ್ಲ ಉದ್ದೇಶಗಳಿಗಾಗಿ ಯಾರೇ ವ್ಯಕ್ತಿಯ ಸಂಬಂಧದಲ್ಲಿ ಇರುವಂತೆಯೇ ಸರ್ಕಾರದ ಸಂಬಂಧದಲ್ಲಿಯೂ ಅದೇ ಪರಿಣಾಮವನ್ನು ಹೊಂದಿರತಕ್ಕದ್ದು ಮತ್ತು ಪೇಟೆಂಟುಗಳ ಅಧಿನಿಯಮ, 1970ರ XVIIನೇ ಅಧ್ಯಾಯದ ಉಪಬಂಧಗಳು ಪೇಟೆಂಟುಗಳಿಗೆ ಅನ್ವಯಿಸುವಂತೆಯೇ ನೋಂದಾಯಿತ ವಿನ್ಯಾಸಗಳಿಗೂ ಅನ್ವಯಿಸತಕ್ಕದ್ದು.

## ಅಧ್ಯಾಯ – IV

## ಕೈಗಾರಿಕಾ ಮತ್ತು ಅಂತರ ರಾಷ್ಟ್ರೀಯ ವಸ್ತು ಪ್ರದರ್ಶನಗಳು

**21. ವಸ್ತು ಪ್ರದರ್ಶನಗಳಿಗೆ ಸಂಬಂಧಿಸಿದ ಉಪಬಂಧಗಳು.–** ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಪ್ರಕರಣದ ಉಪಬಂಧಗಳು ಅನ್ವಯಿಸುವಂಥ ಕೈಗಾರಿಕಾ ಅಥವಾ ಇತರ ವಸ್ತು ಪ್ರದರ್ಶನದಲ್ಲಿ ಅಥವಾ ಮಾಲೀಕನು ಭಾಗಿಯಾಗದೆ ಅಥವಾ ಅವನ ಒಪ್ಪಿಗೆಯಿಲ್ಲದೆ ಯಾರೇ ವ್ಯಕ್ತಿಯು ಬೇರೆಲ್ಲಿಯೇ ಆಗಲಿ ವಸ್ತುಪ್ರದರ್ಶನ ನಡೆಯುವ ಅಥವಾ ಅದರ ನಂತರದ ಅವಧಿಯಲ್ಲಿ ವಿನ್ಯಾಸವನ್ನು ಅಥವಾ ವಿನ್ಯಾಸವನ್ನು ಬಳಸಿರುವ ವಸ್ತುವನ್ನು ಪ್ರದರ್ಶಿಸುವುದು ಅಥವಾ ವಿನ್ಯಾಸದ ವರ್ಣನೆಯನ್ನು ಪ್ರಕಟಣೆ ಮಾಡುವುದು ಅಥವಾ ವಿನ್ಯಾಸದ ಅಥವಾ ವಸ್ತುವಿನ ಪ್ರದರ್ಶನ ಮಾಡುವುದು ಅಥವಾ ವಿನ್ಯಾಸದ ವರ್ಣನೆಯನ್ನು ವಸ್ತು ಪ್ರದರ್ಶನ ನಡೆಯುವ ಅಥವಾ ಅದರ ನಂತರದ ಅವಧಿಯಲ್ಲಿ ಪ್ರಕಟಣೆ ಮಾಡುವುದು ಅಂಥ ವಿನ್ಯಾಸವು ನೋಂದಣಿಯಾಗುವುದಕ್ಕೆ ಅಡ್ಡಿಯಾಗತಕ್ಕದ್ದಲ್ಲ ಅಥವಾ ಅದರ ನೋಂದಣಿಯನ್ನು ಅಸಿಂಧುಗೊಳಿಸತಕ್ಕದ್ದಲ್ಲ:

ಪರಂತು,–

(ಎ) ವಿನ್ಯಾಸ ಅಥವಾ ವಸ್ತುವನ್ನು ಪ್ರದರ್ಶಿಸುವ ಅಥವಾ ವಿನ್ಯಾಸದ ವರ್ಣನೆಯನ್ನು ಪ್ರಕಟಿಸುವ ಪ್ರದರ್ಶಕನು, ನಿಯಮಿಸಿದ ನಮೂನೆಯಲ್ಲಿ ನಿಯಂತ್ರಕನಿಗೆ ಮೊದಲೇ ಸೂಚನೆ ನೀಡಿರಬೇಕು; ಮತ್ತು

(ಬಿ) ವಿನ್ಯಾಸ ಅಥವಾ ವಸ್ತುವನ್ನು ಮೊದಲು ಪ್ರದರ್ಶಿಸಿದ ಅಥವಾ ವಿನ್ಯಾಸದ ವರ್ಣನೆಯನ್ನು ಪ್ರಕಟಿಸಿದ ದಿನಾಂಕದಿಂದ ಆರು ತಿಂಗಳೊಳಗಾಗಿ ನೋಂದಣಿಗಾಗಿ ಅರ್ಜಿ ಸಲ್ಲಿಸಿರಬೇಕು.

## ಅಧ್ಯಾಯ – V
## ಕಾನೂನು ವ್ಯವಹರಣೆಗಳು

**22. ನೋಂದಾಯಿತ ವಿನ್ಯಾಸದ ಚೌರ್ಯ.–** (1) ಯಾವುದೇ ವಿನ್ಯಾಸಕ್ಕೆ ಸಂಬಂಧಿಸಿದ ಕೃತಿಸ್ವಾಮ್ಯವು ಅಸ್ತಿತ್ವದಲ್ಲಿರುವಾಗ, ಯಾರೇ ವ್ಯಕ್ತಿಯು,–

(ಎ) ವಿನ್ಯಾಸವನ್ನು ನೋಂದಾಯಿಸಿರುವ ವಸ್ತುಗಳ ಯಾವುದೇ ವರ್ಗದಲ್ಲಿನ ಯಾವುದೇ ವಸ್ತುವಿಗೆ ಮಾರಾಟದ ಉದ್ದೇಶಕ್ಕಾಗಿ ಲೈಸೆನ್ಸಿನ ಹೊರತು ಅಥವಾ ನೋಂದಾಯಿತ ಮಾಲೀಕನ ಲಿಖಿತ ಸಮ್ಮತಿಯ ಹೊರತು, ವಿನ್ಯಾಸವನ್ನು ಅಥವಾ ಅದರ ಯಾವುದೇ ಮೋಸದ ಅಥವಾ ಸ್ಪಷ್ಟವಾದ ಅನುಕರಣೆಯನ್ನು ಬಳಸುವುದು ಅಥವಾ ಬಳಸುವಂತೆ ಮಾಡುವುದು ಅಥವಾ ವಿನ್ಯಾಸವನ್ನು ಹಾಗೆ ಬಳಸಲು ಅನುಕೂಲವಾಗುವ ದೃಷ್ಟಿಯಿಂದ ಏನನ್ನಾದರೂ ಮಾಡುವುದು; ಅಥವಾ

(ಬಿ) ನೋಂದಾಯಿತ ಮಾಲೀಕನ ಸಮ್ಮತಿ ಇಲ್ಲದೆ, ಯಾವ ವರ್ಗದಲ್ಲಿ ವಿನ್ಯಾಸವನ್ನು ನೋಂದಣಿ ಮಾಡಲಾಯಿತೋ ಆ ಯಾವುದೇ ವರ್ಗಕ್ಕೆ ಸಂಬಂಧಿಸಿದ ಮತ್ತು ಅದಕ್ಕೆ ವಿನ್ಯಾಸವನ್ನು ಅಥವಾ ಅದರ ಯಾವುದೇ ಮೋಸದ ಅದರ ಸ್ಪಷ್ಟ ಅನುಕರಣೆಯನ್ನು ಬಳಸಿದ ಯಾವುದೇ ವಸ್ತುವನ್ನು ಮಾರಾಟದ ಉದ್ದೇಶಗಳಿಗಾಗಿ ಆಮದು ಮಾಡಿಕೊಳ್ಳುವುದು; ಅಥವಾ

(ಸಿ)ಯಾವ ವಸ್ತುಗಳ ವರ್ಗದಲ್ಲಿ ವಿನ್ಯಾಸವನ್ನು ನೋಂದಣಿ ಮಾಡಲಾಯಿತೋ ಆ ಯಾವುದೇ ವಸ್ತುಗಳ ವರ್ಗದಲ್ಲಿನ ಯಾವುದೇ ವಸ್ತುವಿಗೆ ವಿನ್ಯಾಸವನ್ನು ಅಥವಾ ಅದರ ಯಾವುದೇ ಮೋಸದ ಅಥವಾ ಸ್ಪಷ್ಟ ಅನುಕರಣೆಯನ್ನು ಬಳಸಲಾಗಿದೆ ಎಂದು ತಿಳಿದು ನೋಂದಾಯಿತ ಮಾಲೀಕನ ಸಮ್ಮತಿ ಇಲ್ಲದೆ ಆ ವಸ್ತುವನ್ನು ಮಾರಾಟಕ್ಕಾಗಿ ಪ್ರಕಟಿಸುವುದು ಅಥವಾ ಪ್ರದರ್ಶಿಸುವುದು ಅಥವಾ ಪ್ರಕಟಿಸುವಂತೆ ಅಥವಾ ಪ್ರದರ್ಶಿಸುವಂತೆ ಮಾಡುವುದು

– ಕಾನೂನುಬದ್ಧವಾಗಿರತಕ್ಕದ್ದಲ್ಲ.

(2) ಈ ಪ್ರಕರಣವನ್ನು ಉಲ್ಲಂಘಿಸಿ ಕಾರ್ಯಮಾಡುವ ಯಾರೇ ವ್ಯಕ್ತಿಯು, ಅಂಥ ಪ್ರತಿಯೊಂದು ಉಲ್ಲಂಘನೆಗಾಗಿ,–

(ಎ) ಕರಾರು ಋಣವಾಗಿ ವಸೂಲು ಮಾಡಬಹುದಾದ ಇಪ್ಪತ್ತೈದು ಸಾವಿರ ರೂಪಾಯಿಗಳನ್ನು ಮೀರದಂಥ ಮೊತ್ತವನ್ನು ವಿನ್ಯಾಸದ ನೋಂದಾಯಿತ ಮಾಲೀಕನಿಗೆ ಸಂದಾಯ ಮಾಡಲು; ಅಥವಾ

(ಬಿ) ಮಾಲೀಕನು ಅಂಥ ಯಾವುದೇ ಉಲ್ಲಂಘನೆಯ ಸಂಬಂಧದಲ್ಲಿ ಉಂಟಾದ ಹಾನಿಗಳ ವಸೂಲಿಗಾಗಿ ಮತ್ತು ಅದರ ಉಲ್ಲಂಘನೆಯ ಪುನರಾವರ್ತನೆಯ ವಿರುದ್ಧ ನಿರ್ಬಂಧಕಾಜ್ಞೆಗಾಗಿ ದಾವೆಯನ್ನು ಹೂಡಲು ಆಯ್ಕೆ ಮಾಡಿಕೊಂಡರೆ, ಐತೀರ್ಪು ನೀಡಬಹುದಾದ ಅಂಥ ಹಾನಿಗಳನ್ನು ತುಂಬಿಕೊಡಲು ಮತ್ತು ತದನುಸಾರವಾಗಿ ನಿರ್ಬಂಧಕಾಜ್ಞೆಗೆ ಒಳಪಡಲು

– ಬದ್ಧನಾಗಿರತಕ್ಕದ್ದು:

ಪರಂತು, (ಎ) ಖಂಡದ ಮೇರೆಗೆ ಯಾವುದೇ ಒಂದು ವಿನ್ಯಾಸದ ಸಂಬಂಧದಲ್ಲಿ ವಸೂಲು ಮಾಡಬಹುದಾದ ಒಟ್ಟು ಮೊತ್ತವು ಐವತ್ತು ಸಾವಿರ ರೂಪಾಯಿಗಳಿಗೆ ಮೀರತಕ್ಕದ್ದಲ್ಲ:

ಮತ್ತೂ ಪರಂತು, ಈ ಉಪಪ್ರಕರಣದ ಮೇರೆಗೆ ಪರಿಹಾರಕ್ಕಾಗಿ ಹೂಡುವ ಯಾವುದೇ ದಾವೆಯನ್ನು ಅಥವಾ ಇತರ ಯಾವುದೇ ವ್ಯವಹರಣೆಯನ್ನು ಜಿಲ್ಲಾ ನ್ಯಾಯಾಧೀಶರ ನ್ಯಾಯಾಲಯಕ್ಕಿಂತ ಕೆಳಗಿನ ಯಾವುದೇ ನ್ಯಾಯಾಲಯದಲ್ಲಿ ಹೂಡತಕ್ಕದ್ದಲ್ಲ.

(3) (2)ನೇ ಉಪಪ್ರಕರಣದ ಮೇರೆಗೆ ಪರಿಹಾರಕ್ಕಾಗಿ ಹೂಡುವ ಯಾವುದೇ ದಾವೆಯಲ್ಲಿ ಅಥವಾ ಇತರೆ ಯಾವುದೇ ವ್ಯವಹರಣೆಯಲ್ಲಿ 19ನೆಯ ಪ್ರಕರಣದ ಮೇರೆಗೆ ಯಾವ ಆಧಾರದ ಮೇಲೆ ವಿನ್ಯಾಸದ ನೋಂದಣಿಯನ್ನು ರದ್ದುಗೊಳಿಸಬಹುದೋ ಆ ಪ್ರತಿಯೊಂದು ಆಧಾರವು ಪ್ರತಿರಕ್ಷೆಯ ಆಧಾರವಾಗಿ ಲಭ್ಯವಾಗತಕ್ಕದ್ದು.

(4) (2)ನೇ ಉಪಪ್ರಕರಣದ ಎರಡನೆಯ ಪರಂತುಕದಲ್ಲಿ ಏನೇ ಒಳಗೊಂಡಿದ್ದರೂ, ವಿನ್ಯಾಸದ ನೋಂದಣಿಯನ್ನು 19ನೆಯ ಪ್ರಕರಣದ ಮೇರೆಗೆ ಯಾವ ಆಧಾರದ ಮೇಲೆ ರದ್ದುಗೊಳಿಸಬಹುದೋ ಆ ಯಾವುದೇ ಆಧಾರವನ್ನು (2)ನೇ ಉಪಪ್ರಕರಣದ ಮೇರೆಗಿನ ಪರಿಹಾರಕ್ಕಾಗಿ ಯಾವುದೇ ದಾವೆ ಅಥವಾ ಇತರೆ ವ್ಯವಹರಣೆಗೆ ಸಂಬಂಧಿಸಿದಂತೆ (3)ನೇ ಉಪಪ್ರಕರಣದ ಮೇರೆಗಿನ ಪ್ರತಿರಕ್ಷೆಗೆ ಆಧಾರವಾಗಿ ಬಳಸಿಕೊಂಡಿರುವಲ್ಲಿ ದಾವೆಯನ್ನು ಅಥವಾ ಅಂಥ ಇತರೆ ವ್ಯವಹರಣೆಯನ್ನು ತೀರ್ಮಾನಕ್ಕಾಗಿ, ದಾವೆಯು ಅಥವಾ ಅಂಥ ಇತರ ವ್ಯವಹರಣೆಯು ಯಾವ ನ್ಯಾಯಾಲಯದಲ್ಲಿ ಬಾಕಿ ಇರುವುದೋ ಆ ಯಾವುದೇ ನ್ಯಾಯಾಲಯವು ಉಚ್ಚ ನ್ಯಾಯಾಲಯಕ್ಕೆ ವರ್ಗಾಯಿಸತಕ್ಕದ್ದು.

(5) (2)ನೇ ಉಪಪ್ರಕರಣದ ಮೇರೆಗಿನ ದಾವೆಯಲ್ಲಿ ನ್ಯಾಯಾಲಯವು ಡಿಕ್ರಿಯನ್ನು ನೀಡಿದಾಗ, ಡಿಕ್ರಿಯ ಪ್ರತಿಯನ್ನು ನಿಯಂತ್ರಕನಿಗೆ ಕಳುಹಿಸತಕ್ಕದ್ದು. ಅವನು ವಿನ್ಯಾಸಗಳ ರಿಜಿಸ್ಟರಿನಲ್ಲಿ ಅದರ ನಮೂದನ್ನು ಮಾಡಿಸತಕ್ಕದ್ದು.

**23. ಅಧಿನಿಯಮದ ಕೆಲವು ಉಪಬಂಧಗಳನ್ನು ವಿನ್ಯಾಸಗಳ ಪೇಟೆಂಟುಗಳಿಗೆ ಅನ್ವಯಿಸುವುದು.–** ಪೇಟೆಂಟ್‌ನ ಸಿಂಧುತ್ವದ ಪ್ರಮಾಣಪತ್ರಗಳ ಸಂಬಂಧದಲ್ಲಿ ಮತ್ತು ಪೇಟೆಂಟುದಾರನಿಂದ ಕಾನೂನು ವ್ಯವಹರಣೆಗಳ ಆಧಾರರಹಿತ ಬೆದರಿಕೆಗಳ ಸಂದರ್ಭದಲ್ಲಿ ಪರಿಹಾರಕ್ಕೆ, ಪೇಟೆಂಟ್‌ಗಳ ಅಧಿನಿಯಮ, 1970ರ ಉಪಬಂಧಗಳು ವಿನ್ಯಾಸದಲ್ಲಿನ ಕೃತಿಸ್ವಾಮ್ಯಕ್ಕೆ ಮಾಡಿರುವ ಉಲ್ಲೇಖಗಳಿಗೆ ಬದಲಾಗಿ ಪೇಟೆಂಟಿಗೆ ಮಾಡಿದ ಉಲ್ಲೇಖವನ್ನು ಮತ್ತು ವಿನ್ಯಾಸದ ಮಾಲೀಕನಿಗೆ ಮಾಡಿದ ಉಲ್ಲೇಖಗಳಿಗೆ ಬದಲಾಗಿ ಪೇಟೆಂಟುದಾರನಿಗೆ ಮಾಡಿದ ಉಲ್ಲೇಖಗಳನ್ನು ಮತ್ತು ವಿನ್ಯಾಸಕ್ಕೆ ಮಾಡಿದ ಉಲ್ಲೇಖಗಳಿಗೆ ಬದಲಾಗಿ ಅನ್ವೇಷಣೆಗೆ ಮಾಡಿದ ಉಲ್ಲೇಖಗಳನ್ನು ಸೇರಿಸುವುದರೊಂದಿಗೆ, ಪೇಟೆಂಟುಗಳಿಗೆ ಅವು ಅನ್ವಯವಾಗುವಂಥ ರೀತಿಯಲ್ಲಿಯೇ ನೋಂದಾಯಿತ ವಿನ್ಯಾಸಗಳಿಗೂ ಅನ್ವಯವಾಗತಕ್ಕದ್ದು.

## ಅಧ್ಯಾಯ – VI

## ಸಾಮಾನ್ಯ ಫೀಜುಗಳು

**24. ಫೀಜುಗಳು.–** (1) ಈ ಅಧಿನಿಯಮದ ಮೇರೆಗೆ ವಿನ್ಯಾಸಗಳ ನೋಂದಣಿಯ ಮತ್ತು ಅವುಗಳ ಬಳಕೆಯ ಸಂಬಂಧದಲ್ಲಿ ಮತ್ತು ವಿನ್ಯಾಸಗಳಿಗೆ ಸಂಬಂಧಿಸಿದ ಇತರೆ ವಿಷಯಗಳ ಬಗ್ಗೆ ನಿಯಮಿಸಬಹುದಾದಂಥ ಫೀಜನ್ನು ಸಂದಾಯ ಮಾಡತಕ್ಕದ್ದು.

(2) ವ್ಯವಹರಣೆಗೆ ಸಂಬಂಧಿಸಿದಂತೆ ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಅನುಸಾರ ಯಾವ ವ್ಯವಹರಣೆಗಳಿಗೆ ಸಂಬಂಧಿಸಿದಂತೆ ಫೀಜನ್ನು ಸಂದಾಯ ಮಾಡಬೇಕಾಗಿದೆಯೋ ಆ ವ್ಯವಹರಣೆಯು ಫೀಜನ್ನು ಸಂದಾಯ ಮಾಡಿದ ಹೊರತು ಪರಿಣಾಮಕಾರಿಯಾಗಿರತಕ್ಕದ್ದಲ್ಲ.

**ಪೇಟೆಂಟ್ ಕಚೇರಿಯಲ್ಲಿನ ರಿಜಿಸ್ಟರುಗಳಿಗೆ ಮತ್ತು ಇತರ ದಸ್ತಾವೇಜುಗಳಿಗೆ ಸಂಬಂಧಿಸಿದ ಉಪಬಂಧಗಳು**

**25. ವಿಶ್ವಾಸದ ನೋಟೀಸನ್ನು ರಿಜಿಸ್ಟರಿನಲ್ಲಿ ನಮೂದಿಸದಿರುವುದು.–** ಯಾವುದೇ ವ್ಯಕ್ತ, ಇಂಗಿತ ಅಥವಾ ಊಹ್ಯ ವಿಶ್ವಾಸದ ಯಾವುದೇ ನೋಟೀಸನ್ನು ಈ ಅಧಿನಿಯಮದ ಮೇರೆಗೆ ಇಡಲಾದ ಯಾವುದೇ ರಿಜಿಸ್ಟರಿನಲ್ಲಿ ನಮೂದಿಸತಕ್ಕದ್ದಲ್ಲ ಅಥವಾ ನಿಯಂತ್ರಕನು ಅದನ್ನು ಸ್ವೀಕರಿಸತಕ್ಕದ್ದಲ್ಲ.

**26. ರಿಜಿಸ್ಟರುಗಳ ಪರಿಶೀಲನೆ ಮತ್ತು ಅವುಗಳ ಉದ್ಧೃತಗಳು.–** ಈ ಅಧಿನಿಯಮದ ಮೇರೆಗೆ ಇಡಲಾದ ಪ್ರತಿಯೊಂದು ರಿಜಿಸ್ಟರನ್ನು, ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು ಎಲ್ಲ ಅನುಕೂಲಕರ ವೇಳೆಗಳಲ್ಲಿ ಸಾರ್ವಜನಿಕರ ಪರಿಶೀಲನೆಗೆ ಮುಕ್ತವಾಗಿಟ್ಟಿರತಕ್ಕದ್ದು ಮತ್ತು ಅಂಥ ಯಾವುದೇ ರಿಜಿಸ್ಟರಿನಲ್ಲಿನ ಯಾವುದೇ ನಮೂದಿನ ಪ್ರಮಾಣೀಕೃತ ಪ್ರತಿಗಳನ್ನು ಕೋರುವ ಯಾರೇ ವ್ಯಕ್ತಿಯು ನಿಯಮಿಸಿದ ಫೀಜನ್ನು ಸಂದಾಯ ಮಾಡಿದ ನಂತರ ಪೇಟೆಂಟ್ ಕಚೇರಿಯ ಮೊಹರು ಹಾಕಿ ಅವುಗಳನ್ನು ಅವನಿಗೆ ನೀಡತಕ್ಕದ್ದು:

ಪರಂತು, ಅಂಥ ರಿಜಿಸ್ಟರನ್ನು ಪೂರ್ಣವಾಗಿ ಅಥವಾ ಭಾಗಶಃ ಗಣಕಯಂತ್ರದಲ್ಲಿ ನಿರ್ವಹಿಸಿರುವಲ್ಲಿ, ಗಣಕಯಂತ್ರದಲ್ಲಿ ಹಾಗೆ ನಿರ್ವಹಿಸಲಾಗಿರುವ ರಿಜಿಸ್ಟರಿನಲ್ಲಿ ಸಂಬಂಧಪಟ್ಟ ನಮೂದಿನ ಗಣಕ ಯಂತ್ರದ ಮುದ್ರಿತ ಪ್ರತಿಯನ್ನು ಈ ಪ್ರಕರಣದ ಮೇರೆಗೆ ಪರಿಶೀಲನೆ ಮಾಡುವ ಮೂಲಕ ಅಂಥ ರಿಜಿಸ್ಟರಿನ ಪರಿಶೀಲನೆಯನ್ನು ಮಾಡತಕ್ಕದ್ದು.

**27. ನಿಯಂತ್ರಕನ ವರದಿಗಳಿಗೆ ಸಂಬಂಧಿಸಿದಂತೆ ವಿಶೇಷ ಹಕ್ಕು.–** 45ನೇ ಪ್ರಕರಣದಲ್ಲಿ ಉಲ್ಲೇಖಿಸಲಾಗಿರುವ ವರದಿಯನ್ನು ಹೊರತುಪಡಿಸಿ, ಈ ಅಧಿನಿಯಮದ ಮೇರೆಗೆ ನಿಯಂತ್ರಕನ ವರದಿಗಳನ್ನು ಅಥವಾ ಆತನಿಗೆ ಮಾಡಿದ ವರದಿಗಳನ್ನು ಯಾವುದೇ ಸಂದರ್ಭದಲ್ಲಿ ಪ್ರಕಟಿಸತಕ್ಕದ್ದಲ್ಲ ಅಥವಾ ಸಾರ್ವಜನಿಕರ ಪರಿಶೀಲನೆಗೆ ಮುಕ್ತವಾಗಿಡತಕ್ಕದ್ದಲ್ಲ.

**28. ಅರ್ಜಿಯನ್ನು ಮುಂದುವರೆಸದಿರುವಲ್ಲಿ ತಪಶೀಲು, ರೇಖಾಚಿತ್ರ, ಇತ್ಯಾದಿಗಳ ನಿಷೇಧ ಮತ್ತು ಪ್ರಕಟಣೆ.–** ವಿನ್ಯಾಸಕ್ಕಾಗಿನ ಅರ್ಜಿಯನ್ನು ಮುಂದುವರಿಸದಿರುವಲ್ಲಿ ಅಥವಾ ನಿರಾಕರಿಸಿರುವಲ್ಲಿ, ಅರ್ಜಿಯನ್ನು ಮತ್ತು ಅರ್ಜಿಗೆ ಸಂಬಂಧಿಸಿದಂತೆ ಬಿಟ್ಟಿರುವ ಯಾವುದೇ ರೇಖಾಚಿತ್ರ, ಛಾಯಾಚಿತ್ರ, ಒತ್ತು ರೇಖಾಚಿತ್ರ, ನಿರೂಪಣೆಗಳು ಅಥವಾ ಮಾದರಿಗಳನ್ನು ನಿಯಂತ್ರಕನು ಯಾವುದೇ ಕಾಲದಲ್ಲಿ ಸಾರ್ವಜನಿಕರ ಪರಿಶೀಲನೆಗೆ ಮುಕ್ತವಾಗಿಡತಕ್ಕದ್ದಲ್ಲ ಅಥವಾ ಪ್ರಕಟಗೊಳಿಸತಕ್ಕದ್ದಲ್ಲ.

**29. ಲಿಪಿಕ ದೋಷಗಳನ್ನು ಸರಿಪಡಿಸುವುದಕ್ಕೆ ನಿಯಂತ್ರಕನ ಅಧಿಕಾರ.–** ನಿಯಮಿಸಿದ ಫೀಜಿನೊಂದಿಗೆ ಲಿಖಿತ ಕೋರಿಕೆ ಸಲ್ಲಿಸಿರುವುದರ ಮೇರೆಗೆ ನಿಯಂತ್ರಕನು, ವಿನ್ಯಾಸಗಳ ರಿಜಿಸ್ಟರಿನಲ್ಲಿ ನಮೂದಾಗಿರುವ ವಿನ್ಯಾಸದ ನಿರೂಪಣೆಯಲ್ಲಿ ಅಥವಾ ಯಾವುದೇ ವಿನ್ಯಾಸದ ಮಾಲೀಕನ ಹೆಸರಿನಲ್ಲಿ ಅಥವಾ ವಿಳಾಸದಲ್ಲಿ, ಅಥವಾ ಯಾವುದೇ ಇತರೆ ವಿಷಯದಲ್ಲಿ ಉಂಟಾಗಿರುವ ಯಾವುದೇ ಲಿಪಿಕ ದೋಷಗಳನ್ನು ಸರಿಪಡಿಸಬಹುದು.

**30. ರಿಜಿಸ್ಟರುಗಳಲ್ಲಿ ಹಸ್ತಾಂತರಣ ಮತ್ತು ವರ್ಗಾವಣೆಗಳ ನಮೂದು.–** (1) ವ್ಯಕ್ತಿಯು ನೋಂದಾಯಿತ ವಿನ್ಯಾಸದಲ್ಲಿನ ಕೃತಿಸ್ವಾಮ್ಯಕ್ಕೆ ಹಸ್ತಾಂತರಣದ, ವರ್ಗಾವಣೆಯ ಅಥವಾ ಇತರೆ ಕಾನೂನಿನ ಪ್ರವರ್ತನೆಯ

ಮೂಲಕ ಹಕ್ಕುಳ್ಳವನಾಗಿರುವಲ್ಲಿ, ಅವನು, ತನ್ನ ಹಕ್ಕುಸ್ವಾಮ್ಯವನ್ನು ನೋಂದಾಯಿಸಿಕೊಳ್ಳಲು ನಿಯಂತ್ರಕನಿಗೆ ನಿಯಮಿಸಿದ ನಮೂನೆಯಲ್ಲಿ ಅರ್ಜಿ ಸಲ್ಲಿಸಬಹುದು ಮತ್ತು ನಿಯಂತ್ರಕನು, ಅಂಥ ಅರ್ಜಿಯನ್ನು ಸ್ವೀಕರಿಸಿದ ಮೇಲೆ ಮತ್ತು ಹಕ್ಕುಸ್ವಾಮ್ಯದ ರುಜುವಾತನ್ನು ಮನದಟ್ಟು ಮಾಡಿಕೊಂಡ ನಂತರ, ಅವನನ್ನು ಅಂಥ ವಿನ್ಯಾಸದ ಮಾಲೀಕನೆಂಬುದಾಗಿ ನೋಂದಾಯಿಸತಕ್ಕದ್ದು, ಮತ್ತು ಅಂಥ ಹಕ್ಕುಸ್ವಾಮ್ಯಕ್ಕೆ ಸಂಬಂಧಿಸಿದ ಹಸ್ತಾಂತರಣ, ವರ್ಗಾವಣೆ ಅಥವಾ ಇತರೆ ಲಿಖಿತಗಳ ರಿಜಿಸ್ಟರಿನಲ್ಲಿ ನಿಯಮಿಸಿದ ರೀತಿಯಲ್ಲಿ ನಮೂದನ್ನು ಮಾಡಿಸತಕ್ಕದ್ದು.

(2) ನೋಂದಾಯಿತ ವಿನ್ಯಾಸದ ಯಾವುದೇ ಹಿತಾಸಕ್ತಿಯ ಸಂಬಂಧದಲ್ಲಿ ಯಾರೇ ವ್ಯಕ್ತಿಯು ಅಡಮಾನ ಪಡೆದವನಾಗಿ, ಲೈಸೆನ್ಸುದಾರನಾಗಿ ಅಥವಾ ಇತರೆ ರೀತಿಯಲ್ಲಿ ಹಕ್ಕುಳ್ಳವನಾದಲ್ಲಿ, ಅವನು ತನ್ನ ಹಕ್ಕುಸ್ವಾಮ್ಯವನ್ನು ನೋಂದಾಯಿಸಿಕೊಳ್ಳಲು ನಿಯಂತ್ರಕನಿಗೆ ನಿಯಮಿಸಿದ ರೀತಿಯಲ್ಲಿ ಅರ್ಜಿ ಸಲ್ಲಿಸಬಹುದು ಮತ್ತು ನಿಯಂತ್ರಕನು ಅಂಥ ಅರ್ಜಿಯನ್ನು ಸ್ವೀಕರಿಸಿದ ಮೇಲೆ ಮತ್ತು ಅಂಥ ಹಕ್ಕು ಸ್ವಾಮ್ಯದ ರುಜುವಾತಿನ ಬಗ್ಗೆ ತಾನು ಮನದಟ್ಟು ಮಾಡಿಕೊಂಡ ನಂತರ, ಅಂಥ ಹಿತಾಸಕ್ತಿಯನ್ನು ಸೃಜಿಸುವಂಥ ಲಿಖಿತಗಳ ವಿವರಗಳು ಯಾವುವಾದರೂ ಇದ್ದರೆ, ಅವುಗಳೊಂದಿಗೆ ವಿನ್ಯಾಸಗಳ ರಿಜಿಸ್ಟರಿನಲ್ಲಿ ನಿಯಮಿಸಿದ ರೀತಿಯಲ್ಲಿ ಹಿತಾಸಕ್ತಿಯ ನೋಟೀಸನ್ನು ನಮೂದಿಸುವಂತೆ ಮಾಡತಕ್ಕದ್ದು.

(3) (1)ನೇ ಉಪಪ್ರಕರಣದ ಅಥವಾ (2)ನೇ ಉಪಪ್ರಕರಣದ ಉದ್ದೇಶಗಳಿಗಾಗಿ, ವಿನ್ಯಾಸದ ಅಥವಾ ವಿನ್ಯಾಸದಲ್ಲಿನ ಒಂದು ಭಾಗದ ಹಸ್ತಾಂತರಣವು ಅಡಮಾನ, ಲೈಸೆನ್ಸ್ ಅಥವಾ ವಿನ್ಯಾಸದಲ್ಲಿನ ಯಾವುದೇ ಇತರ ಹಿತಾಸಕ್ತಿಯ ಸೃಜನೆಯು ಬರವಣಿಗೆಯಲ್ಲಿ ಇದ್ದ ಮತ್ತು ಸಂಬಂಧಪಟ್ಟ ಪಕ್ಷಕಾರರ ನಡುವೆ ಆದ ಒಪ್ಪಂದವು ಅವರ ಹಕ್ಕುಗಳು ಮತ್ತು ಹೊಣೆಗಾರಿಕೆಗಳನ್ನು ನಿಯಂತ್ರಿಸುವ ಎಲ್ಲ ನಿಬಂಧನೆಗಳು ಮತ್ತು ಷರತ್ತುಗಳನ್ನು ಒಳಗೊಂಡಿರುವ, ಲಿಖಿತದ ರೂಪದಲ್ಲಿ ಇದ್ದ ಹೊರತು ಮತ್ತು ಅಂಥ ಲಿಖಿತದ ಅಡಿಯಲ್ಲಿನ ಹಕ್ಕುಸ್ವಾಮ್ಯದ ನೋಂದಣಿಗಾಗಿ ಅರ್ಜಿಯನ್ನು, ಲಿಖಿತವನ್ನು ಬರೆದುಕೊಟ್ಟ ದಿನಾಂಕದಿಂದ ಆರು ತಿಂಗಳೊಳಗಾಗಿ ಅಥವಾ ನಿಯಮಿಸಿದ ರೀತಿಯಲ್ಲಿ ಸಲ್ಲಿಸಿದ ಅರ್ಜಿಯ ಮೇಲೆ ನಿಯಂತ್ರಕನು ಅನುಮತಿಸುವ ಒಟ್ಟು ಆರು ತಿಂಗಳಿಗೆ ಮೀರದ ಹೆಚ್ಚಿನ ಅವಧಿಯೊಳಗಾಗಿ ನಿಯಂತ್ರಕನಿಗೆ ಸಲ್ಲಿಸಿದ ಹೊರತು ಸಿಂಧುವಾಗತಕ್ಕದ್ದಲ್ಲ:

ಪರಂತು, ಆ ಲಿಖಿತವು (1)ನೇ ಉಪಪ್ರಕರಣದ ಅಥವಾ (2)ನೇ ಉಪಪ್ರಕರಣದ ಮೇರೆಗೆ ರಿಜಿಸ್ಟರಿನಲ್ಲಿ ಅದರ ವಿವರಗಳನ್ನು ನಮೂದು ಮಾಡಿದ ನಂತರ, ಅದನ್ನು ಬರೆದುಕೊಟ್ಟ ದಿನಾಂಕದಿಂದ ಪರಿಣಾಮ ಹೊಂದಿರತಕ್ಕದ್ದು.

(4) ವಿನ್ಯಾಸದ ಮಾಲೀಕನಾಗಿ ನೋಂದಾಯಿಸಿಕೊಂಡ ವ್ಯಕ್ತಿಯು, ಈ ಅಧಿನಿಯಮದ ಉಪಬಂಧಗಳಿಗೆ ಮತ್ತು ಯಾರೇ ಇತರ ವ್ಯಕ್ತಿಯಲ್ಲಿ ನಿಹಿತಗೊಳಿಸತಕ್ಕದ್ದೆಂದು ರಿಜಿಸ್ಟರಿನಿಂದ ಕಂಡುಬರುವ ಯಾವುದೇ ಹಕ್ಕುಗಳಿಗೊಳಪಟ್ಟು, ವಿನ್ಯಾಸಕ್ಕೆ ಸಂಬಂಧಿಸಿದಂತೆ ಹಸ್ತಾಂತರಣ ಮಾಡುವುದಕ್ಕೆ, ಲೈಸೆನ್ಸುಗಳನ್ನು ನೀಡುವುದಕ್ಕೆ ಅಥವಾ ಇತರೆ ಯಾವುದೇ ರೀತಿಯಲ್ಲಿ ವ್ಯವಹರಿಸುವುದಕ್ಕೆ ಮತ್ತು ಅಂಥ ಯಾವುದೇ ಹಸ್ತಾಂತರಣಕ್ಕೆ, ಲೈಸೆನ್ಸ್ ನೀಡಿಕೆಗೆ ಅಥವಾ ವ್ಯವಹಾರಕ್ಕೆ ಪ್ರತಿಫಲವಾಗಿ ಪರಿಣಾಮಕಾರಿ ರಸೀದಿಗಳನ್ನು ನೀಡುವುದಕ್ಕೆ ಸಂಪೂರ್ಣ ಅಧಿಕಾರ ಹೊಂದಿರತಕ್ಕದ್ದು:

ಪರಂತು, ವಿನ್ಯಾಸದ ಸಂಬಂಧದಲ್ಲಿ ಯಾವುವೇ ಈಕ್ವಿಟಿಗಳನ್ನು ಯಾವುದೇ ಇತರೆ ಚರಸ್ವತ್ತಿನ ಸಂಬಂಧದಲ್ಲಿ ಜಾರಿಗೊಳಿಸಬಹುದಾದಂಥ ರೀತಿಯಲ್ಲಿಯೇ ಜಾರಿಗೊಳಿಸಬಹುದು.

(5) 31ನೆಯ ಪ್ರಕರಣದ ಮೇರೆಗೆ ಸಲ್ಲಿಸಿದ ಅರ್ಜಿಗೆ ಸಂಬಂಧಿಸಿದಂತೆ ಹೊರತು, (1)ನೇ ಮತ್ತು (2)ನೇ ಉಪ ಪ್ರಕರಣಗಳ ಉಪಬಂಧಗಳ ಅನುಸಾರ ರಿಜಿಸ್ಟರಿನಲ್ಲಿ ಯಾವ ದಸ್ತಾವೇಜು ಅಥವಾ ಲಿಖಿತದ ಸಂಬಂಧದಲ್ಲಿ ಯಾವುದೇ ನಮೂದು ಮಾಡಿಲ್ಲವೋ ಆ ದಸ್ತಾವೇಜನ್ನು ಅಥವಾ ಲಿಖಿತವನ್ನು,

ನ್ಯಾಯಾಲಯವು ಲಿಖಿತದಲ್ಲಿ ಕಾರಣಗಳನ್ನು ದಾಖಲಿಸಿ ಅನ್ಯಥಾ ನಿರ್ದೇಶಿಸಿದ ಹೊರತು, ವಿನ್ಯಾಸದಲ್ಲಿನ ಕೃತಿಸ್ವಾಮ್ಯದ ಹಕ್ಕಿನ ಅಥವಾ ಅದರಲ್ಲಿಯ ಯಾವುದೇ ಹಿತಾಸಕ್ತಿಯ ರುಜುವಾತಾಗಿ, ಯಾವುದೇ ನ್ಯಾಯಾಲಯದಲ್ಲಿ ಸಾಕ್ಷ್ಯವಾಗಿ ಅಂಗೀಕರಿಸತಕ್ಕದ್ದಲ್ಲ.

**31. ರಿಜಿಸ್ಟರನ್ನು ಸರಿಪಡಿಸುವುದು.–** (1) ವಿನ್ಯಾಸಗಳ ರಿಜಿಸ್ಟರಿನಲ್ಲಿ ಯಾವುದೇ ನಮೂದನ್ನು ಸೇರಿಸದಿರುವುದರಿಂದ ಅಥವಾ ಅದರಿಂದ ಬಿಟ್ಟುಹೋಗಿರುವುದರಿಂದ, ಅಥವಾ ಸಾಕಷ್ಟು ಕಾರಣಗಳಿಲ್ಲದೆ ಅಂಥ ರಿಜಿಸ್ಟರಿನಲ್ಲಿ ಯಾವುದೇ ನಮೂದು ಮಾಡಿರುವುದರಿಂದ ಅಥವಾ ಅಂಥ ರಿಜಿಸ್ಟರಿನಲ್ಲಿ ಯಾವುದೇ ನಮೂದು ತಪ್ಪಾಗಿ ಉಳಿದುಹೋಗಿರುವುದರಿಂದ ಅಥವಾ ಅಂಥ ರಿಜಿಸ್ಟರಿನಲ್ಲಿ ಯಾವುದೇ ನಮೂದಿನಲ್ಲಿ ತಪ್ಪು ಅಥವಾ ದೋಷ ಇರುವುದರಿಂದ ಬಾಧಿತನಾದ ಯಾರೇ ವ್ಯಕ್ತಿಯು, ನಿಯಮಿಸಿದ ರೀತಿಯಲ್ಲಿ ಅರ್ಜಿ ಸಲ್ಲಿಸಿದ ತರುವಾಯ, ನಿಯಂತ್ರಕನು, ತಾನು ಸೂಕ್ತವೆಂದು ಭಾವಿಸುವ ಅಂಥ ನಮೂದನ್ನು ದಾಖಲಿಸಲು, ತೆಗೆದು ಹಾಕಲು ಅಥವಾ ಮಾರ್ಪಾಟುಗೊಳಿಸಲು ಅಂಥ ಆದೇಶವನ್ನು ಮಾಡಬಹುದು ಮತ್ತು ತದನುಸಾರವಾಗಿ ಆ ರಿಜಿಸ್ಟರನ್ನು ಸರಿಪಡಿಸಬಹುದು.

(2) ನಿಯಂತ್ರಕನು, ಈ ಪ್ರಕರಣದ ಮೇರೆಗಿನ ಯಾವುದೇ ವ್ಯವಹರಣೆಯಲ್ಲಿ ರಿಜಿಸ್ಟರನ್ನು ಸರಿಪಡಿಸುವ ಸಂಬಂಧದಲ್ಲಿ ನಿರ್ಣಯಿಸಲು ಅವಶ್ಯಕವಿರಬಹುದಾದ ಅಥವಾ ವಿಹಿತವಿರಬಹುದಾದ ಯಾವುದೇ ಪ್ರಶ್ನೆಯನ್ನು ನಿರ್ಣಯಿಸಬಹುದು.

(3) ಈ ಪ್ರಕರಣದ ಮೇರೆಗೆ ನಿಯಂತ್ರಕನ ಯಾವುದೇ ಆದೇಶದ ವಿರುದ್ಧ ಉಚ್ಚ ನ್ಯಾಯಾಲಯಕ್ಕೆ ಅಪೀಲು ಮಾಡಬಹುದು ಮತ್ತು ನಿಯಂತ್ರಕನು ಈ ಪ್ರಕರಣದ ಮೇರೆಗಿನ ಯಾವುದೇ ಅರ್ಜಿಯನ್ನು ತೀರ್ಮಾನಕ್ಕಾಗಿ ಉಚ್ಚ ನ್ಯಾಯಾಲಯಕ್ಕೆ ಉಲ್ಲೇಖಿಸಬಹುದು ಮತ್ತು ಹಾಗೆ ಉಲ್ಲೇಖಿಸಿದ ಯಾವುದೇ ಅರ್ಜಿಯನ್ನು ಉಚ್ಚ ನ್ಯಾಯಾಲಯವು ವಿಲೆ ಮಾಡತಕ್ಕದ್ದು.

(4) ರಿಜಿಸ್ಟರನ್ನು ಸರಿಪಡಿಸುವಂತೆ ನ್ಯಾಯಾಲಯವು ನೀಡಿದ ಯಾವುದೇ ಆದೇಶವನ್ನು ಸರಿಪಡಿಸುವ ನೋಟೀಸನ್ನು ನಿಯಮಿಸಿದ ರೀತಿಯಲ್ಲಿ ನಿಯಂತ್ರಕನಿಗೆ ಜಾರಿಗೊಳಿಸತಕ್ಕದ್ದೆಂದು ನಿರ್ದೇಶಿಸತಕ್ಕದ್ದು. ಅವನು ಅಂಥ ನೋಟೀಸನ್ನು ಸ್ವೀಕರಿಸಿದ ತರುವಾಯ ತದನುಸಾರವಾಗಿ ರಿಜಿಸ್ಟರನ್ನು ಸರಿಪಡಿಸತಕ್ಕದ್ದು.

(5) ಈ ಪ್ರಕರಣದಲ್ಲಿರುವುದು ಯಾವುದೂ, 19ನೆಯ ಪ್ರಕರಣದಲ್ಲಿ ಉಪಬಂಧಿಸಿರುವಂತೆ ವಿನ್ಯಾಸದ ನೋಂದಣಿಯನ್ನು ರದ್ದುಗೊಳಿಸುವಂಥ ಯಾವುದೇ ಆದೇಶವನ್ನು ಮಾಡಲು ನಿಯಂತ್ರಕನಿಗೆ ಅಧಿಕಾರ ನೀಡಿದೆಯೆಂದು ಭಾವಿಸತಕ್ಕದ್ದಲ್ಲ.

## ಅಧ್ಯಾಯ – VII

## ನಿಯಂತ್ರಕನ ಅಧಿಕಾರಗಳು ಮತ್ತು ಕರ್ತವ್ಯಗಳು

**32. ಈ ಅಧಿನಿಯಮದ ಮೇರೆಗಿನ ವ್ಯವಹರಣೆಗಳಲ್ಲಿ ನಿಯಂತ್ರಕನ ಅಧಿಕಾರಗಳು.–** ಈ ಸಂಬಂಧವಾಗಿ ರಚಿಸಿದ ಯಾವುವೇ ನಿಯಮಗಳಿಗೊಳಪಟ್ಟು, ನಿಯಂತ್ರಕನು, ಈ ಅಧಿನಿಯಮದ ಮೇರೆಗೆ ತನ್ನ ಮುಂದಿರುವ ಯಾವುವೇ ವ್ಯವಹರಣೆಗಳಲ್ಲಿ ಸಾಕ್ಷ್ಯವನ್ನು ಸ್ವೀಕರಿಸುವ, ಪ್ರಮಾಣಗಳನ್ನು ಬೋಧಿಸುವ, ಸಾಕ್ಷಿದಾರರ ಹಾಜರಿಯನ್ನು ಒತ್ತಾಯಪಡಿಸುವ, ದಸ್ತಾವೇಜುಗಳ ಶೋಧನೆಗೆ ಮತ್ತು ಹಾಜರುಪಡಿಸುವುದಕ್ಕೆ ಒತ್ತಾಯಿಸುವ, ಸಾಕ್ಷಿದಾರರನ್ನು ಪರೀಕ್ಷಿಸುವುದಕ್ಕಾಗಿ ಕಮಿಷನ್ನುಗಳನ್ನು ಹೊರಡಿಸುವ ಮತ್ತು ವೆಚ್ಚಗಳ ಬಗ್ಗೆ ಐತೀರ್ಪು ನೀಡುವ ಉದ್ದೇಶಕ್ಕಾಗಿ ಸಿವಿಲ್ ನ್ಯಾಯಾಲಯದ ಅಧಿಕಾರಗಳನ್ನು ಹೊಂದಿರತಕ್ಕದ್ದು ಮತ್ತು ಅಂಥ

ಐತೀರ್ಪನ್ನು, ಅದು ಆ ನ್ಯಾಯಾಲಯದ ಡಿಕ್ರಿಯಾಗಿದ್ದರೆ ಹೇಗೋ ಹಾಗೆ ಅಧಿಕಾರ ವ್ಯಾಪ್ತಿ ಹೊಂದಿರುವ ಯಾವುದೇ ನ್ಯಾಯಾಲಯದಲ್ಲಿ ಜಾರಿಗೊಳಿಸಬಹುದಾದುದು ಆಗಿರತಕ್ಕದ್ದು.

**33. ನಿಯಂತ್ರಕನಿಂದ ವಿವೇಚನಾಧಿಕಾರದ ಚಲಾವಣೆ.–** ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ನಿಯಂತ್ರಕನಿಗೆ ಯಾವುವೇ ವಿವೇಚನಾಧಿಕಾರವನ್ನು ನೀಡಿರುವಲ್ಲಿ, ಅರ್ಜಿದಾರನಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು (ಅರ್ಜಿದಾರನು ಹಾಗೆ ಅಗತ್ಯಪಡಿಸಿದಲ್ಲಿ ನಿಯಮಿಸಿದ ಕಾಲದೊಳಗಾಗಿ) ಯುಕ್ತ ಅವಕಾಶ ನೀಡಿದ ಹೊರತು, ವಿನ್ಯಾಸದ ನೋಂದಣಿಯ ಸಂಬಂಧದಲ್ಲಿ ಅರ್ಜಿದಾರನಿಗೆ ಪ್ರತಿಕೂಲವಾಗುವ ರೀತಿಯಲ್ಲಿ ಅವನು ಅಂಥ ಅಧಿಕಾರವನ್ನು ಚಲಾಯಿಸತಕ್ಕದ್ದಲ್ಲ.

**34. ಕೇಂದ್ರ ಸರ್ಕಾರದ ನಿರ್ದೇಶನಗಳನ್ನು ಪಡೆದುಕೊಳ್ಳಲು ನಿಯಂತ್ರಕನ ಅಧಿಕಾರ.–** ಈ ಅಧಿನಿಯಮದ ಯಾವುವೇ ಉಪಬಂಧಗಳನ್ನು ಅನ್ವಯಿಸುವಲ್ಲಿ ನಿಯಂತ್ರಕನಿಗೆ ಯಾವುದೇ ಸಂದೇಹ ಅಥವಾ ತೊಂದರೆ ಉದ್ಭವಿಸಿದ ಸಂದರ್ಭದಲ್ಲಿ, ಆ ವಿಷಯದ ಬಗ್ಗೆ ನಿರ್ದೇಶನ ನೀಡುವಂತೆ ಅವನು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿಕೊಳ್ಳಬಹುದು.

**35. ಕೆಲವು ಸಂದರ್ಭಗಳಲ್ಲಿ ವಿನ್ಯಾಸವನ್ನು ನೋಂದಾಯಿಸಲು ನಿರಾಕರಣೆ.–** (1) ವಿನ್ಯಾಸದ ಬಳಕೆಯು ಸಾರ್ವಜನಿಕ ಸುವ್ಯವಸ್ಥೆಗೆ ಅಥವಾ ನೈತಿಕತೆಗೆ ವಿರುದ್ಧವಾದುದು ಆಗಿದೆಯೆಂದು ನಿಯಂತ್ರಕನು ಅಭಿಪ್ರಾಯಪಟ್ಟರೆ, ಅಂಥ ವಿನ್ಯಾಸವನ್ನು ನೋಂದಾಯಿಸಲು ನಿರಾಕರಿಸಬಹುದು.

(2) ಈ ಪ್ರಕರಣದ ಮೇರೆಗೆ ನಿಯಂತ್ರಕನು ಮಾಡಿದ ಆದೇಶದ ವಿರುದ್ಧ ಉಚ್ಚ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಲು ಅವಕಾಶವಿರತಕ್ಕದ್ದು.

**36. ಉಚ್ಚ ನ್ಯಾಯಾಲಯಕ್ಕೆ ಅಪೀಲುಗಳು.–** (1) ನಿಯಂತ್ರಕನು ಮಾಡಿದ ಆದೇಶದ ವಿರುದ್ಧ ಉಚ್ಚ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಲು ಅವಕಾಶವಿರುವ ಬಗ್ಗೆ ಈ ಅಧಿನಿಯಮದ ಮೇರೆಗೆ ಘೋಷಿಸಿರುವಲ್ಲಿ, ನಿಯಂತ್ರಕನು ಆದೇಶ ಹೊರಡಿಸಿದ ದಿನಾಂಕದಿಂದ ಮೂರು ತಿಂಗಳೊಳಗಾಗಿ ಅಪೀಲನ್ನು ಸಲ್ಲಿಸತಕ್ಕದ್ದು.

(2) ಸದರಿ ಮೂರು ತಿಂಗಳ ಅವಧಿಯನ್ನು ಲೆಕ್ಕಹಾಕುವಲ್ಲಿ, ಯಾವ ಆದೇಶದ ವಿರುದ್ಧ ಅಪೀಲನ್ನು ಸಲ್ಲಿಸಲಾಗಿದೆಯೋ ಅದರ ಒಂದು ಪ್ರತಿಯನ್ನು ನೀಡಲು ತೆಗೆದುಕೊಂಡ ಅವಧಿಯನ್ನು (ಯಾವುದಾದರೂ ಇದ್ದರೆ) ಬಿಟ್ಟುಬಿಡತಕ್ಕದ್ದು.

(3) ಉಚ್ಚ ನ್ಯಾಯಾಲಯವು, ತಾನು ಸೂಕ್ತವೆಂದು ಭಾವಿಸಿದರೆ, ಅಂಥ ಅಪೀಲುಗಳನ್ನು ತೀರ್ಮಾನಿಸುವಾಗ ಒಬ್ಬ ತಜ್ಞನ ನೆರವನ್ನು ಪಡೆಯಬಹುದು ಮತ್ತು ಉಚ್ಚ ನ್ಯಾಯಾಲಯದ ತೀರ್ಮಾನವು ಅಂತಿಮವಾಗಿರತಕ್ಕದ್ದು.

(4) ಉಚ್ಚ ನ್ಯಾಯಾಲಯದ ಮುಂದಿರುವ ಈ ಅಧಿನಿಯಮದ ಮೇರೆಗಿನ ಎಲ್ಲ ವ್ಯವಹರಣೆಗಳ ನಿರ್ವಹಣೆಗೆ ಮತ್ತು ಕಾರ್ಯವಿಧಾನಕ್ಕೆ ಸಂಬಂಧಿಸಿದಂತೆ ಈ ಅಧಿನಿಯಮಕ್ಕೆ ಸುಸಂಗತವಾಗುವ ನಿಯಮಗಳನ್ನು ಅದು ರಚಿಸಬಹುದು.

## ಅಧ್ಯಾಯ - VIII

### ಸಾಕ್ಷ್ಯ, ಇತ್ಯಾದಿ

**37. ನಿಯಂತ್ರಕನ ಮುಂದಿರುವ ಸಾಕ್ಷ್ಯ.–** 44ನೇ ಪ್ರಕರಣದ ಮೇರೆಗೆ ರಚಿಸಿದ ಯಾವುದೇ ನಿಯಮಗಳಿಗೊಳಪಟ್ಟು, ನಿಯಂತ್ರಕನ ಮುಂದೆ ಇರುವ ಈ ಅಧಿನಿಯಮದ ಮೇರೆಗಿನ ಯಾವುದೇ ವ್ಯವಹರಣೆಯಲ್ಲಿ, ನಿಯಂತ್ರಕನು ತದ್ವಿರುದ್ಧವಾದ ನಿರ್ದೇಶನಗಳನ್ನು ನೀಡಿರದಿದ್ದರೆ, ಸಾಕ್ಷ್ಯವನ್ನು ಶಪಥಪತ್ರದ ಮೂಲಕ ನೀಡತಕ್ಕದ್ದು. ಆದರೆ ಶಪಥಪತ್ರದ ಮೂಲಕ ನೀಡುವ ಸಾಕ್ಷ್ಯದ ಬದಲಾಗಿ ಅಥವಾ ಅದಕ್ಕೆ ಹೆಚ್ಚಿಗೆಯಾಗಿ ಮೌಖಿಕ ಸಾಕ್ಷ್ಯವನ್ನು ಪಡೆಯುವುದು ಅಥವಾ ಅವನ ಶಪಥಪತ್ರದ ಒಳಾಂಶಗಳ ಮೇಲೆ ಯಾರೇ ಪಕ್ಷಕಾರನಿಗೆ ಪಾಟೀ ಸವಾಲು ಮಾಡಲು ಅವಕಾಶ ನೀಡುವುದು ಸೂಕ್ತವೆಂದು ನಿಯಂತ್ರಕನು ಯೋಚಿಸುವ ಯಾವುದೇ ಸಂದರ್ಭದಲ್ಲಿ, ಅವನು ಹಾಗೆ ಮಾಡಬಹುದು.

**38. ನಿಯಂತ್ರಕನ ಪ್ರಮಾಣಪತ್ರವು ಸಾಕ್ಷ್ಯವಾಗಿರುವುದು.–** ಯಾವುದೇ ನಮೂದಿಗೆ, ವಿಷಯಕ್ಕೆ ಅಥವಾ ಕಾರ್ಯಕ್ಕೆ ಸಂಬಂಧಿಸಿದಂತೆ ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಮೂಲಕ ರಚಿಸಲು ಅಥವಾ ಮಾಡಲು ಅಧಿಕಾರ ಹೊಂದಿರುವ ನಿಯಂತ್ರಕನು ತನ್ನ ಹಸ್ತಾಕ್ಷರದೊಂದಿಗೆ ನೀಡಿರುವವನೆಂದು ತಾತ್ಪರ್ಯವಾಗುವ ಪ್ರಮಾಣಪತ್ರವು ಹಾಗೆ ಮಾಡಿದ ನಮೂದಿನ, ಮತ್ತು ಅದರ ಒಳಾಂಶಗಳ ಮತ್ತು ಮಾಡಿದ ಅಥವಾ ಮಾಡದೆ ಬಿಟ್ಟಿರುವ ವಿಷಯ ಅಥವಾ ಕಾರ್ಯದ ಮೇಲ್ನೋಟದ ಸಾಕ್ಷ್ಯವಾಗತಕ್ಕದ್ದು.

**39. ಪೇಟೆಂಟ್ ಕಚೇರಿಯಲ್ಲಿನ ದಸ್ತಾವೇಜುಗಳ ಸಾಕ್ಷ್ಯ.–** ನಿಯಂತ್ರಕನಿಂದ ಪ್ರಮಾಣೀಕರಿಸಲಾಗಿದೆಯೆಂದು ಮತ್ತು ಪೇಟೆಂಟ್ ಕಚೇರಿಯ ಮೊಹರಿನೊಂದಿಗೆ ಮೊಹರು ಮಾಡಲಾಗಿದೆಯೆಂದು ತಾತ್ಪರ್ಯವಾಗುವ ಪೇಟೆಂಟ್ ಕಚೇರಿಯಲ್ಲಿನ ದಸ್ತಾವೇಜುಗಳನ್ನು ಮತ್ತು ಅಲ್ಲಿ ಇಟ್ಟಿರುವ ರಿಜಿಸ್ಟರುಗಳನ್ನು ಮತ್ತು ಇತರೆ ಪುಸ್ತಕಗಳನ್ನು ಅಥವಾ ಅವುಗಳಿಂದ ತೆಗೆದ ಮುದ್ರಿತ ಅಥವಾ ಲಿಖಿತ ಪ್ರತಿಗಳನ್ನು ಅಥವಾ ಉದ್ಧೃತಗಳನ್ನು ಇನ್ನೂ ಹೆಚ್ಚಿನ ರುಜುವಾತಿಲ್ಲದೆ ಅಥವಾ ಮೂಲ ಪ್ರತಿಗಳನ್ನು ಹಾಜರುಪಡಿಸದೆಯೇ ಭಾರತದ ಎಲ್ಲ ನ್ಯಾಯಾಲಯಗಳಲ್ಲಿ ಸಾಕ್ಷ್ಯವಾಗಿ ಅಂಗೀಕರಿಸತಕ್ಕದ್ದು:

ಪರಂತು, ಸಾಕ್ಷ್ಯವಾಗಿ ಒದಗಿಸಿರುವ ಪ್ರತಿಗಳ ಯಥಾರ್ಥತೆ ಅಥವಾ ಅಧಿಕೃತತೆಯ ಬಗ್ಗೆ ಅನುಮಾನಪಡಲು ನ್ಯಾಯಾಲಯಕ್ಕೆ ಕಾರಣವಿದ್ದರೆ, ಅದು ಅವಶ್ಯವೆಂದು ಭಾವಿಸುವ ಮೂಲ ಪ್ರತಿಗಳನ್ನು ಅಥವಾ ಅಂಥ ಹೆಚ್ಚಿನ ರುಜುವಾತನ್ನು ಹಾಜರುಪಡಿಸುವಂತೆ ಅಗತ್ಯಪಡಿಸಬಹುದು.

**40. ಅಂಚೆ ಮೂಲಕ ಅರ್ಜಿ ಮತ್ತು ನೋಟೀಸುಗಳು.–** ಈ ಅಧಿನಿಯಮದ ಅಡಿಯಲ್ಲಿ ಪೇಟೆಂಟ್ ಕಚೇರಿಗೆ ಅಥವಾ ನಿಯಂತ್ರಕನಿಗೆ ಅಥವಾ ಯಾರೇ ಇತರೆ ವ್ಯಕ್ತಿಗೆ ನೀಡಲು ಅಥವಾ ಸಲ್ಲಿಸಲು ಅಥವಾ ಕೊಡಲು ಅಧಿಕೃತಗೊಳಿಸಿದ ಅಥವಾ ಅಗತ್ಯಪಡಿಸಿದ ಯಾವುದೇ ಅರ್ಜಿಯನ್ನು, ನೋಟೀಸನ್ನು ಅಥವಾ ಇತರೆ ದಸ್ತಾವೇಜನ್ನು ಅಂಚೆ ಮೂಲಕ ಕಳುಹಿಸಬಹುದು.

**41. ಶಿಶು, ಮನೋವಿಕಲ ಮೊದಲಾದವರಿಂದ ಘೋಷಣೆ.–** (1) ಶೈಶವದ, ಮನೋವಿಕಲತೆಯ ಅಥವಾ ಇತರೆ ಅಸಮರ್ಥತೆಯ ಕಾರಣದಿಂದಾಗಿ ಯಾರೇ ವ್ಯಕ್ತಿಯು ಯಾವುದೇ ಹೇಳಿಕೆಯನ್ನು ನೀಡಲು ಅಥವಾ ಈ ಅಧಿನಿಯಮದ ಮೂಲಕ ಅಥವಾ ಅಡಿಯಲ್ಲಿ ಅಗತ್ಯಪಡಿಸಿದ ಅಥವಾ ಅನುಮತಿಸಿದ ಯಾವುದನ್ನಾದರೂ ಮಾಡಲು ಅಸಮರ್ಥನಾಗಿರುವಲ್ಲಿ, ಅಸಮರ್ಥತೆಗೊಳಗಾದ ವ್ಯಕ್ತಿಯ ಕಾನೂನುಬದ್ಧ ಪಾಲಕನು, ಸಮಿತಿಯು ಅಥವಾ ವ್ಯವಸ್ಥಾಪಕನು (ಯಾರಾದರೂ ಇದ್ದರೆ) ಅಥವಾ ಹಾಗೆ ಯಾರೂ ಇಲ್ಲದಿದ್ದರೆ, ಅವನ ಸ್ವತ್ತಿನ ಸಂಬಂಧದಲ್ಲಿ ಅಧಿಕಾರ ವ್ಯಾಪ್ತಿ ಹೊಂದಿರುವ ಯಾವುದೇ ನ್ಯಾಯಾಲಯದಿಂದ ನೇಮಕಗೊಂಡ ಯಾರೇ

ವ್ಯಕ್ತಿಯು, ಅಂಥ ಹೇಳಿಕೆಯು ಅಥವಾ ಪರಿಸ್ಥಿತಿಗಳು ಅನುಮತಿಸಿದಂತೆ ಅದಕ್ಕೆ ಸಾಧ್ಯವಿರುವಷ್ಟು ನಿಕಟವಾದ ಸಂವಾದಿ ಹೇಳಿಕೆಯನ್ನು ನೀಡಬಹುದು ಮತ್ತು ಅಸಮರ್ಥತೆಗೊಳಗಾದ ಅಂಥ ವ್ಯಕ್ತಿಯ ಹೆಸರಿನಲ್ಲಿ ಮತ್ತು ಅವನ ಪರವಾಗಿ ಅಂಥ ಕಾರ್ಯವನ್ನು ಮಾಡಬಹುದು.

(2) ಅಸಮರ್ಥತೆಗೊಳಗಾದ ವ್ಯಕ್ತಿಯ ಪರವಾಗಿ ಕಾರ್ಯ ನಿರ್ವಹಿಸುತ್ತಿರುವ ಯಾರೇ ವ್ಯಕ್ತಿಯು ಅಥವಾ ಹೇಳಿಕೆಯನ್ನು ನೀಡುವಲ್ಲಿ ಅಥವಾ ಕಾರ್ಯ ನಿರ್ವಹಿಸುವಲ್ಲಿ ಹಿತಾಸಕ್ತಿಯುಳ್ಳ ಯಾರೇ ಇತರೆ ವ್ಯಕ್ತಿಯು ಸಲ್ಲಿಸಿದ ಅರ್ಜಿಯ ಮೇಲೆ ಈ ಪ್ರಕರಣದ ಉದ್ದೇಶಗಳಿಗಾಗಿ ನ್ಯಾಯಾಲಯವು ನೇಮಕವನ್ನು ಮಾಡಬಹುದು.

**42. ಕೆಲವು ನಿರ್ಬಂಧಕ ಷರತ್ತುಗಳನ್ನು ಬಿಟ್ಟುಬಿಡುವುದು.–** (1) ಯಾವ ವಸ್ತುವಿನ ಸಂಬಂಧದಲ್ಲಿ,–

(i) ವಿನ್ಯಾಸವನ್ನು ನೋಂದಾಯಿಸಲಾಗಿದೆಯೋ ಆ ವಸ್ತುವಿನ ಮಾರಾಟ ಅಥವಾ ಗುತ್ತಿಗೆಗಾಗಿನ ಅಥವಾ ಅದಕ್ಕೆ ಸಂಬಂಧಪಟ್ಟ ಯಾವುದೇ ಕರಾರಿನಲ್ಲಿ ಅಥವಾ ಸಂಬಂಧದಲ್ಲಿ; ಅಥವಾ

(ii) ವಿನ್ಯಾಸವನ್ನು ನೋಂದಾಯಿಸಲಾಗಿದೆಯೋ ಆ ವಸ್ತುವಿನ ತಯಾರಿಕೆಯ ಅಥವಾ ಬಳಕೆಯ ಲೈಸೆನ್ಸಿನಲ್ಲಿ; ಅಥವಾ

(iii) ವಿನ್ಯಾಸವನ್ನು ನೋಂದಾಯಿಸಲಾಗಿದೆಯೋ ಆ ವಸ್ತುವನ್ನು ಪ್ಯಾಕ್ ಮಾಡುವ ಲೈಸೆನ್ಸ್‌ನಲ್ಲಿ, –

(ಎ) ಯಾವ ವಸ್ತುವಿನ ಸಂಬಂಧದಲ್ಲಿ ವಿನ್ಯಾಸವನ್ನು ನೋಂದಾಯಿಸಲಾಗಿದೆಯೋ ಆ ವಸ್ತುವನ್ನು ಹೊರತುಪಡಿಸಿ, ಯಾವುದೇ ವಸ್ತುವನ್ನು ಮಾರಾಟಗಾರನಿಂದ, ಗುತ್ತಿಗೆಗೆ ಕೊಡುವವನಿಂದ, ಅಥವಾ ಲೈಸೆನ್ಸು ಕೊಡುವವನಿಂದ ಅಥವಾ ಅವನ ನಾಮ ನಿರ್ದೇಶಿತನಿಂದ ಖರೀದಿದಾರನು, ಗುತ್ತಿಗೆದಾರನು ಅಥವಾ ಲೈಸೆನ್ಸುದಾರನು ಮಾರಾಟಗಾರನಿಂದ ಗುತ್ತಿಗೆಗೆ ಕೊಡುವವನಿಂದ ಅಥವಾ ಲೈಸೆನ್ಸುದಾರನಿಂದ ಅಥವಾ ಅವನ ನಾಮ ನಿರ್ದೇಶಿತನಿಂದ ಆರ್ಜಿಸಲು ಅಥವಾ ಯಾರೇ ವ್ಯಕ್ತಿಯಿಂದ ಆರ್ಜಿಸುವ ಅವನ ಹಕ್ಕನ್ನು ಯಾವುದೇ ರೀತಿಯಲ್ಲಿ ಅಥವಾ ಎಷ್ಟು ಮಟ್ಟಿಗಾದರೂ ನಿರ್ಬಂಧಿಸಲು ಅಥವಾ ಮಾರಾಟಗಾರನಿಂದ ಅಥವಾ ಗುತ್ತಿಗೆ ಕೊಡುವವನಿಂದ ಅಥವಾ ಲೈಸೆನ್ಸ್‌ದಾರನಿಂದ ಅಥವಾ ಅವನ ನಾಮನಿರ್ದೇಶಿತನಿಂದ ಹೊರತಾಗಿ, ಆರ್ಜಿಸುವುದರಿಂದ ಅವನನ್ನು ನಿಷೇಧಿಸುವ; ಅಥವಾ

(ಬಿ) ಮಾರಾಟಗಾರನಿಂದ, ಗುತ್ತಿಗೆ ಕೊಡುವವನಿಂದ ಅಥವಾ ಲೈಸೆನ್ಸು ಕೊಡುವವನಿಂದ ಅಥವಾ ಅವನ ನಾಮನಿರ್ದೇಶಿತನಿಂದ ಸರಬರಾಜು ಮಾಡಿರದ ನೋಂದಾಯಿಸಲಾದಂಥ ವಿನ್ಯಾಸದ ವಸ್ತುವನ್ನು ಹೊರತುಪಡಿಸಿದ ಒಂದು ವಸ್ತುವನ್ನು ಖರೀದಿದಾರನು, ಗುತ್ತಿಗೆ ಪಡೆದವನು ಅಥವಾ ಲೈಸೆನ್ಸು ಪಡೆದವನು ಬಳಸುವುದನ್ನು ನಿಷೇಧಿಸುವ ಅಥವಾ ಖರೀದಿದಾರನ, ಗುತ್ತಿಗೆ ಪಡೆದವನ ಅಥವಾ ಲೈಸೆನ್ಸು ಪಡೆದವನ ಹಕ್ಕನ್ನು ಯಾವುದೇ ರೀತಿಯಲ್ಲಿ ಅಥವಾ ಎಷ್ಟರ ಮಟ್ಟಿಗಾದರೂ ನಿರ್ಬಂಧಿಸುವ

– ಪರಿಣಾಮವುಳ್ಳ ಯಾವುದೇ ಷರತ್ತನ್ನು ಸೇರಿಸುವುದು ಕಾನೂನು ಬದ್ಧವಾಗಿರತಕ್ಕದ್ದಲ್ಲ ಮತ್ತು ಅಂಥ ಯಾವುದೇ ಷರತ್ತು ಶೂನ್ಯವಾಗತಕ್ಕದ್ದು.

(2) (1)ನೇ ಉಪಪ್ರಕರಣದ (ಎ) ಖಂಡದಲ್ಲಿ ಅಥವಾ (ಬಿ)ಖಂಡದಲ್ಲಿ ಉಲ್ಲೇಖಿಸಿರುವ ಸ್ವರೂಪದ ಷರತ್ತು, ಅದನ್ನು ಒಳಗೊಂಡ ಒಪ್ಪಂದವು ಒಂದು ವಿನ್ಯಾಸವನ್ನು ನೋಂದಾಯಿಸಲಾಗಿರುವ ವಸ್ತುವಿನ

ಮಾರಾಟ, ಗುತ್ತಿಗೆ ಅಥವಾ ಲೈಸೆನ್ಸಿಗೆ ಸಂಬಂಧಿಸಿದ ಕರಾರನ್ನು ಮುಂಚಿತವಾಗಿಯಾಗಲಿ ಅಥವಾ ತರುವಾಯವಾಗಿಯಾಗಲಿ ಪ್ರತ್ಯೇಕವಾಗಿ ಮಾಡಿಕೊಳ್ಳಲಾಗಿದೆಯೆಂಬ ಸಂಗತಿಯ ಕಾರಣ ಮಾತ್ರದಿಂದಲೇ ಆ ಉಪಪ್ರಕರಣದೊಳಗೆ ಬರುವ ಷರತ್ತಾಗಿರುವುದು ನಿಂತುಹೋಗತಕ್ಕದ್ದಲ್ಲ.

(3) 22ನೇ ಪ್ರಕರಣವನ್ನು ಉಲ್ಲಂಘಿಸಿದ ಯಾವುದೇ ಕೃತ್ಯಕ್ಕಾಗಿ ಯಾರೇ ವ್ಯಕ್ತಿಯ ವಿರುದ್ಧದ ವ್ಯವಹರಣೆಯಲ್ಲಿ ಅಂಥ ಉಲ್ಲಂಘನೆಯ ಕಾಲದಲ್ಲಿ ನೋಂದಾಯಿತ ವಿನ್ಯಾಸಕ್ಕೆ ಸಂಬಂಧಿಸಿದಂತೆ ಮತ್ತು ಈ ಪ್ರಕರಣದ ಮೂಲಕ ಕಾನೂನುಬಾಹಿರವಾದುದೆಂದು ಘೋಷಿಸಲಾದ ಷರತ್ತುಗಳನ್ನೊಳಗೊಂಡ ಕರಾರು ಜಾರಿಯಲ್ಲಿತ್ತೆಂಬುದನ್ನು ರುಜುವಾತುಪಡಿಸುವುದು ಪ್ರತಿರಕ್ಷೆಯಾಗಿರತಕ್ಕದ್ದು:

ಪರಂತು, ವಾದಿಯು ಕರಾರಿಗೆ ಒಬ್ಬ ಪಕ್ಷಕಾರನಾಗಿರದಿದ್ದರೆ ಮತ್ತು ಆ ನಿರ್ಬಂಧಕ ಷರತ್ತನ್ನು ಅವನ ತಿಳಿವಳಿಕೆಗೆ ಬಾರದಂತೆ ಮತ್ತು ಅವನ ವ್ಯಕ್ತ ಅಥವಾ ಇಂಗಿತ ಸಮ್ಮತಿಯಿಲ್ಲದೆ ಕರಾರಿನಲ್ಲಿ ಸೇರಿಸಲಾಗಿತ್ತೆಂದು ನ್ಯಾಯಾಲಯಕ್ಕೆ ಮನದಟ್ಟಾಗುವಂತೆ ರುಜುವಾತುಪಡಿಸಿದರೆ ಈ ಉಪ ಪ್ರಕರಣವು, ಅನ್ವಯವಾಗತಕ್ಕದ್ದಲ್ಲ.

(4) ಈ ಪ್ರಕರಣದಲ್ಲಿರುವುದು ಯಾವುದೂ,-

(ಎ) ಒಬ್ಬ ನಿರ್ದಿಷ್ಟ ವ್ಯಕ್ತಿಯ ಬಳಿಯಿರುವ ಸರಕುಗಳನ್ನು ಹೊರತುಪಡಿಸಿ ವ್ಯಕ್ತಿಯು ಸರಕುಗಳನ್ನು ಮಾರಾಟ ಮಾಡುವುದರಿಂದ ಅವನನ್ನು ನಿಷೇಧಿಸುವ, ಕರಾರಿನಲ್ಲಿರುವ ಷರತ್ತಿಗೆ ಬಾಧಕವುಂಟು ಮಾಡತಕ್ಕದ್ದಲ್ಲ;

(ಬಿ) ಈ ಪ್ರಕರಣ ಇರದಿದ್ದರೆ ಅಸಿಂಧುವಾಗಬಹುದಾಗಿದ್ದ ಕರಾರನ್ನು ಸಿಂಧುಗೊಳಿಸತಕ್ಕದ್ದಲ್ಲ.

(ಸಿ) ಯಾವ ವಸ್ತುವಿನ ಸಂಬಂಧದಲ್ಲಿ ವಿನ್ಯಾಸವನ್ನು ನೋಂದಾಯಿಸಲಾಗಿದೆಯೋ ಅದರ ಗುತ್ತಿಗೆಯ ಕರಾರಿನಲ್ಲಿಯ ಅಥವಾ ಬಳಕೆಯ ಲೈಸೆನ್ಸ್‌ನಲ್ಲಿಯ ಷರತ್ತಿನಿಂದಾಗಿ ಗುತ್ತಿಗೆ ಕೊಟ್ಟವನು ಅಥವಾ ಲೈಸೆನ್ಸ್ ಕೊಟ್ಟವನು ಯಾವ ವಸ್ತುವಿನ ಹೊಸ ಭಾಗಗಳಿಗೆ ಸಂಬಂಧಿಸಿದಂತೆ ವಿನ್ಯಾಸವನ್ನು ನೋಂದಾಯಿಸಲಾಗಿದೆಯೋ ಅಂಥ ಹೊಸ ಭಾಗಗಳನ್ನು ಅಗತ್ಯಪಡಿಸಬಹುದಾದಂತೆ ಸರಬರಾಜು ಮಾಡಲು ಅಥವಾ ದುರಸ್ತಿಗೊಳಿಸಲು ಅಥವಾ ದುರಸ್ತಿಗಾಗಿ ಇಟ್ಟುಕೊಳ್ಳಲು ಸ್ವತಃ ತಾನೇ ಅಥವಾ ತನ್ನ ನಾಮನಿರ್ದೇಶಿತನಿಗೆ ಹಕ್ಕನ್ನು ಕಾಯ್ದಿರಿಸಿಕೊಂಡಿದ್ದಲ್ಲಿ, ಅಂಥ ಷರತ್ತಿಗೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

(5) ಈ ಪ್ರಕರಣದ ಉಪಬಂಧವು, ಈ ಪ್ರಕರಣದ ಮೂಲಕ ಕಾನೂನು ಬಾಹಿರವೆಂದು ಘೋಷಿಸಲಾದ ಯಾವುವೇ ನಿರ್ಬಂಧಕ ಷರತ್ತುಗಳು ಈ ಅಧಿನಿಯಮದ ಪ್ರಾರಂಭದಿಂದ ಒಂದು ವರ್ಷ ಮುಕ್ತಾಯವಾದ ತರುವಾಯ ಜಾರಿಯಲ್ಲಿರುವುದು ಮುಂದುವರಿದಲ್ಲಿ ಮತ್ತು ಅಷ್ಟರಮಟ್ಟಿಗೆ ಈ ಅಧಿನಿಯಮವು ಪ್ರಾರಂಭವಾಗುವ ಮುಂಚೆ ಮಾಡಿದ ಕರಾರುಗಳಿಗೂ ಅನ್ವಯವಾಗತಕ್ಕದ್ದು.

## ಅಧ್ಯಾಯ - IX

## ಏಜೆನ್ಸಿ

**43. ಏಜೆನ್ಸಿ.-** (1) ಈ ಅಧಿನಿಯಮದ ಮೇರೆಗೆ ನಿಯಂತ್ರಕನಿಗೆ ಸಲ್ಲಿಸುವ ಎಲ್ಲ ಅರ್ಜಿಗಳಿಗೆ ಮತ್ತು ಅವನೊಂದಿಗೆ ಮಾಡುವ ಎಲ್ಲ ಪತ್ರ ವ್ಯವಹಾರಗಳಿಗೆ ಸಹಿಯನ್ನು ಮತ್ತು ನಿಯಂತ್ರಕನ ಎಲ್ಲ ಹಾಜರಾತಿಗಳನ್ನು ನ್ಯಾಯವಾದಿಯು ಅಥವಾ ಅವನ ಮೂಲಕ ಅಥವಾ ಪೇಟೆಂಟ್ ಅಧಿನಿಯಮ, 1970 (1970ರ 39)ರ 125ನೇ

ಪ್ರಕರಣದ ಮೇರೆಗೆ ನಿರ್ವಹಿಸಲಾದ ಪೇಟೆಂಟ್ ಏಜೆಂಟರ ರಿಜಿಸ್ಟರಿನಲ್ಲಿ ಯಾರ ಹೆಸರನ್ನು ಮತ್ತು ವಿಳಾಸವನ್ನು ನಮೂದು ಮಾಡಲಾಗಿದಿಯೋ ಆ ಏಜೆಂಟನು ಅಥವಾ ಅವನ ಮೂಲಕ ಮಾಡಬಹುದು.

(2) ನಿಯಂತ್ರಕನು ತನಗೆ ಸೂಕ್ತವೆಂದು ಕಂಡರೆ,–

(ಎ) ಅಂಥ ಯಾರೇ ಏಜೆಂಟನು ಭಾರತದ ನಿವಾಸಿಯಾಗಿರಬೇಕೆಂದು;

(ಬಿ) ಭಾರತದಲ್ಲಿ ವಾಸವಾಗಿರದ ಯಾರೇ ವ್ಯಕ್ತಿಯು ಭಾರತದಲ್ಲಿ ವಾಸವಾಗಿರುವ ಏಜೆಂಟನನ್ನು ನಿಯೋಜಿಸಿಕೊಳ್ಳಬೇಕೆಂದು;

(ಸಿ) ಯಾರೇ ಅರ್ಜಿದಾರನ ಅಥವಾ ಇತರೆ ವ್ಯಕ್ತಿಯ ವೈಯಕ್ತಿಕ ಸಹಿಯನ್ನು ಅಥವಾ ಹಾಜರಾತಿಯನ್ನು

– ಅಗತ್ಯಪಡಿಸಬಹುದು.

## ಅಧ್ಯಾಯ – X

## ಕೇಂದ್ರ ಸರ್ಕಾರದ ಅಧಿಕಾರಗಳು, ಇತ್ಯಾದಿ

**44. ಯುನೈಟೆಡ್ ಕಿಂಗ್‌ಡಮ್ ಮತ್ತು ಇತರೆ ಒಡಂಬಡಿಕೆಯ ರಾಷ್ಟ್ರಗಳು ಅಥವಾ ರಾಷ್ಟ್ರಗಳ ಸಮೂಹ ಅಥವಾ ಅಂತರಸರ್ಕಾರಿ ಸಂಸ್ಥೆಗಳೊಂದಿಗೆ ಪರಸ್ಪರ ವ್ಯವಸ್ಥೆ.–** (1) ಯುನೈಟೆಡ್ ಕಿಂಗ್‌ಡಮ್‌ನಲ್ಲಿ ಅಥವಾ ಯಾವುದೇ ಇತರೆ ಒಡಂಬಡಿಕೆಯ ರಾಷ್ಟ್ರಗಳಲ್ಲಿ ಅಥವಾ ರಾಷ್ಟ್ರಗಳ ಸಮೂಹದಲ್ಲಿ ಅಥವಾ ಅಂತರ ಸರ್ಕಾರಿ ಸಂಸ್ಥೆಗಳ ಸದಸ್ಯರಾಗಿರುವ ರಾಷ್ಟ್ರಗಳಲ್ಲಿ ಯಾವುದೇ ವಿನ್ಯಾಸದ ರಕ್ಷಣೆಗಾಗಿ ಅರ್ಜಿ ಸಲ್ಲಿಸಿರುವ ಯಾರೇ ವ್ಯಕ್ತಿಯು ಅಥವಾ ಅವನ ಕಾನೂನುಸಮ್ಮತ ಪ್ರತಿನಿಧಿಯು ಅಥವಾ ಹಸ್ತಾಂತರ ಪಡೆದವನು ಒಬ್ಬನೇ ಆಗಲಿ ಅಥವಾ ಯಾರೇ ಇತರೆ ವ್ಯಕ್ತಿಯೊಂದಿಗೆ ಜಂಟಿಯಾಗಿಯಾಗಲಿ ಈ ಅಧಿನಿಯಮದ ಮೇರೆಗೆ ಸದರಿ ವಿನ್ಯಾಸದ ನೋಂದಣಿಯು ಇತರೆ ಅರ್ಜಿದಾರರಿಗಿಂತ ಆದ್ಯತೆಯಲ್ಲಿರತಕ್ಕದ್ದೆಂದು ಕ್ಲೇಮು ಮಾಡಲು ಹಕ್ಕುಳ್ಳವನಾಗಿರತಕ್ಕದ್ದು ಮತ್ತು ಅದು ಸಂದರ್ಭಾನುಸಾರ ಯುನೈಟೆಡ್ ಕಿಂಗ್‌ಡಮ್‌ನಲ್ಲಿ ಅಥವಾ ಅಂಥ ಯಾವುವೇ ಇತರೆ ಒಡಂಬಡಿಕೆಯ ರಾಷ್ಟ್ರಗಳಲ್ಲಿ ಅಥವಾ ರಾಷ್ಟ್ರಗಳ ಸಮೂಹದಲ್ಲಿ ಅಥವಾ ಅಂತರ ಸರ್ಕಾರಿ ಸಂಸ್ಥೆಗಳ ಸದಸ್ಯ ರಾಷ್ಟ್ರಗಳಲ್ಲಿ, ಅರ್ಜಿ ಸಲ್ಲಿಸಲಾದ ದಿನಾಂಕವನ್ನೇ ಹೊಂದಿರತಕ್ಕದ್ದು:

ಪರಂತು,–

(ಎ) ಯುನೈಟೆಡ್ ಕಿಂಗ್‌ಡಮ್‌ನಲ್ಲಿ ಅಥವಾ ಸಂದರ್ಭಾನುಸಾರ ಅಂಥ ಯಾವುವೇ ಇತರೆ ಒಡಂಬಡಿಕೆ ರಾಷ್ಟ್ರಗಳಲ್ಲಿ ಅಥವಾ ರಾಷ್ಟ್ರಗಳ ಸಮೂಹದಲ್ಲಿ ಅಥವಾ ಅಂತರ ಸರ್ಕಾರಿ ಸಂಸ್ಥೆಗಳ ಸದಸ್ಯರಾಗಿರುವ ರಾಷ್ಟ್ರಗಳಲ್ಲಿ ರಕ್ಷಣೆಗಾಗಿ ಅರ್ಜಿಯನ್ನು ಸಲ್ಲಿಸಿದ ದಿನಾಂಕದಿಂದ ಆರು ತಿಂಗಳೊಳಗಾಗಿ ಆ ಅರ್ಜಿಯನ್ನು ಸಲ್ಲಿಸಿರಬೇಕು; ಮತ್ತು

(ಬಿ) ಈ ಪ್ರಕರಣದಲ್ಲಿ ಇರುವುದು ಯಾವುದೂ, ಭಾರತದಲ್ಲಿ ವಿನ್ಯಾಸವನ್ನು ನೋಂದಣಿ ಮಾಡಿದ ವಾಸ್ತವ ದಿನಾಂಕಕ್ಕೆ ಮುಂಚೆ ಸಂಭವಿಸಿದ ವಿನ್ಯಾಸದ ಚೌರ್ಯದ ಬಗ್ಗೆ ಆದ ನಷ್ಟವನ್ನು ವಸೂಲಿ ಮಾಡಲು ವಿನ್ಯಾಸದ ಮಾಲೀಕನನ್ನು ಹಕ್ಕುಳ್ಳುವನನ್ನಾಗಿಸತಕ್ಕದ್ದಲ್ಲ.

(2) ಈ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ, ಯಾವ ಅವಧಿಯಲ್ಲಿ ಅರ್ಜಿಯನ್ನು ಸಲ್ಲಿಸಬಹುದೋ ಆ ಅವಧಿಯಲ್ಲಿ ಭಾರತದಲ್ಲಿ ವಿನ್ಯಾಸದ ವರ್ಣನೆಯ ಅಥವಾ ನಿರೂಪಣೆಯ ಪ್ರದರ್ಶನ ಅಥವಾ ಬಳಕೆ ಅಥವಾ ಪ್ರಕಟಣೆಯ ಕಾರಣ ಮಾತ್ರದಿಂದಲೇ ವಿನ್ಯಾಸದ ನೋಂದಣಿಯನ್ನು ಅಸಿಂಧುಗೊಳಿಸತಕ್ಕದ್ದಲ್ಲ.

(3) ಈ ಪ್ರಕರಣದ ಮೇರೆಗೆ ವಿನ್ಯಾಸದ ನೋಂದಣಿಗಾಗಿ ಸಲ್ಲಿಸುವ ಅರ್ಜಿಯನ್ನು ಈ ಅಧಿನಿಯಮದ ಮೇರೆಗೆ ಸಲ್ಲಿಸುವ ಸಾಮಾನ್ಯ ಅರ್ಜಿಯ ರೀತಿಯಲ್ಲಿಯೇ ಸಲ್ಲಿಸಿರಬೇಕು.

(4) ಯುನೈಟೆಡ್ ಕಿಂಗ್‌ಡಮ್‌ನ ವಿಧಾನ ಮಂಡಲವು ಅಥವಾ ಯಾವುದೇ ಅಂಥ ಇತರೆ ಒಡಂಬಡಿಕೆ ರಾಷ್ಟ್ರವು ಅಥವಾ ರಾಷ್ಟ್ರಗಳ ಯಾವುದೇ ಸಮೂಹದ ಸದಸ್ಯವಾಗಿರುವ ರಾಷ್ಟ್ರ ಅಥವಾ ಈ ಪರವಾಗಿ ಕೇಂದ್ರ ಸರ್ಕಾರವು ಅಧಿಸೂಚಿಸಬಹುದಾದ ಅಂತರ ಸರ್ಕಾರಿ ಸಂಸ್ಥೆಯು ಭಾರತದಲ್ಲಿ ನೋಂದಾಯಿಸಿರುವ ವಿನ್ಯಾಸಗಳ ರಕ್ಷಣೆಗಾಗಿ ತೃಪ್ತಿಕರ ಉಪಬಂಧವನ್ನು ಮಾಡಿದೆಯೆಂದು ಕೇಂದ್ರ ಸರ್ಕಾರಕ್ಕೆ ಕಂಡು ಬಂದಲ್ಲಿ ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಅಂಥ ಅಧಿಸೂಚನೆಯಲ್ಲಿ ನಿರೂಪಿಸಬಹುದಾದಂಥ ಮಾರ್ಪಾಟುಗಳು ಅಥವಾ ಸೇರ್ಪಡೆಗಳು ಯಾವುವೇ ಇದ್ದಲ್ಲಿ ಅವುಗಳೊಂದಿಗೆ, ಈ ಪ್ರಕರಣದ ಉಪಬಂಧಗಳನ್ನು ಸಂದರ್ಭಾನುಸಾರ ಯುನೈಟೆಡ್ ಕಿಂಗ್‌ಡಮ್‌ನಲ್ಲಿ ಅಥವಾ ಇತರೆ ಒಡಂಬಡಿಕೆ ದೇಶದಲ್ಲಿ ಅಥವಾ ರಾಷ್ಟ್ರಗಳ ಯಾವುದೇ ಸಮೂಹದ ಸದಸ್ಯ ರಾಷ್ಟ್ರದಲ್ಲಿ ಅಥವಾ ಅಂತರಸರ್ಕಾರಿ ಸಂಸ್ಥೆಯಲ್ಲಿ ನೋಂದಾಯಿಸಲಾದ ವಿನ್ಯಾಸಗಳ ರಕ್ಷಣೆಗಾಗಿ ಅನ್ವಯಿಸತಕ್ಕದ್ದೆಂದು ನಿರ್ದೇಶಿಸಬಹುದು.

**ವಿವರಣೆ.–** (1) ಈ ಪ್ರಕರಣದ ಉದ್ದೇಶಗಳಿಗಾಗಿ, "ಒಡಂಬಡಿಕೆಯ ರಾಷ್ಟ್ರಗಳು" "ರಾಷ್ಟ್ರಗಳ ಸಮೂಹ" ಅಥವಾ "ಅಂತರಸರ್ಕಾರೀಸಂಸ್ಥೆ" ಎಂದರೆ, 1967ರಲ್ಲಿ ಸ್ಟಾಕ್‌ಹೋಂನಲ್ಲಿ ಪರಿಷ್ಕರಿಸಲಾದ ಮತ್ತು 1979ರಲ್ಲಿ ತಿದ್ದುಪಡಿಯಾದ ಕೈಗಾರಿಕಾ ಸ್ವತ್ತಿನ ರಕ್ಷಣೆಯ ಪ್ಯಾರಿಸ್ ಒಡಂಬಡಿಕೆ, 1883 ಅಥವಾ ವಿಶ್ವ ವ್ಯಾಪಾರ ಸಂಸ್ಥೆಯ ಸ್ಥಾಪನೆಗಾಗಿ ಉಪಬಂಧಿಸಲಾದ ಉರುಗ್ವೆ ಬಹುಪಕ್ಷೀಯ ವ್ಯಾಪಾರ ಮಾತುಕತೆಗಳ ಸುತ್ತಿನ ಫಲಿತಾಂಶಗಳನ್ನು ಒಳಗೊಂಡ ಅಂತಿಮ ಅಧಿನಿಯಮವು ಅನ್ವಯಿಸುವ ಸಂಬಂಧಪಟ್ಟ ರಾಷ್ಟ್ರಗಳು, ರಾಷ್ಟ್ರಗಳ ಸಮೂಹ ಅಥವಾ ಅಂತರಸರ್ಕಾರಿ ಸಂಸ್ಥೆ ಎಂದು ಅರ್ಥ.

**ವಿವರಣೆ.–** (2) (1)ನೆಯ ಉಪಪ್ರಕರಣದಲ್ಲಿ ಉಲ್ಲೇಖಿಸಲಾದಂತೆ ರಕ್ಷಣೆಗಾಗಿ ಒಂದಕ್ಕಿಂತ ಹೆಚ್ಚು ಅರ್ಜಿಗಳನ್ನು ಯುನೈಟೆಡ್ ಕಿಂಗ್‌ಡಮ್‌ನಲ್ಲಿ ಅಥವಾ ಒಂದು ಅಥವಾ ಹೆಚ್ಚು ಒಡಂಬಡಿಕೆಯ ರಾಷ್ಟ್ರಗಳಲ್ಲಿ, ರಾಷ್ಟ್ರಗಳ ಸಮೂಹದಲ್ಲಿ ಅಥವಾ ಅಂತರಸರ್ಕಾರಿ ಸಂಸ್ಥೆಗಳ ಸದಸ್ಯ ರಾಷ್ಟ್ರಗಳಲ್ಲಿ ಅದೇ ರೀತಿಯ ರಕ್ಷಣೆಗಳಿಗಾಗಿ ಸಲ್ಲಿಸಿರುವಲ್ಲಿ, ಆ ಉಪ ಪ್ರಕರಣದ (ಎ) ಖಂಡದಲ್ಲಿ ಉಲ್ಲೇಖಿಸಿದ ಆರು ತಿಂಗಳ ಅವಧಿಯನ್ನು ಅಂಥ ಅರ್ಜಿಗಳ ಪೈಕಿ ಸಂಧರ್ಭಾನುಸಾರ ಈ ಮೊದಲು ಅಥವಾ ಅದಕ್ಕೂ ಮೊದಲು ಸಲ್ಲಿಸಿದ ಅರ್ಜಿಯ ದಿನಾಂಕದಿಂದ ಲೆಕ್ಕ ಹಾಕತಕ್ಕದ್ದು.

**45. ನಿಯಂತ್ರಕನ ವರದಿಯನ್ನು ಸಂಸತ್ತಿನ ಮುಂದೆ ಇಡುವುದು.–** ಕೇಂದ್ರ ಸರ್ಕಾರವು, ನಿಯಂತ್ರಕನಿಂದ ಅಥವಾ ಅವನ ಮೂಲಕ ಈ ಅಧಿನಿಯಮವನ್ನು ಕಾರ್ಯಗತಗೊಳಿಸಿರುವ ಸಂಬಂಧದ ವರದಿಯನ್ನು ವರ್ಷಕ್ಕೆ ಒಂದು ಬಾರಿ ಸಂಸತ್ತಿನ ಉಭಯ ಸದನಗಳ ಮುಂದೆ ಇಡುವಂತೆ ಮಾಡತಕ್ಕದ್ದು.

**46. ಭಾರತದ ಭದ್ರತೆಯ ರಕ್ಷಣೆ.–** ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದಾಗ್ಯೂ, ನಿಯಂತ್ರಕನು,–

(ಎ) ಈ ಅಧಿನಿಯಮದ ಮೇರೆಗೆ ವಿನ್ಯಾಸದ ನೋಂದಣಿಗೆ ಸಂಬಂಧಿಸಿದ ಯಾವುದೇ ಮಾಹಿತಿಯನ್ನು ಅಥವಾ ವಿನ್ಯಾಸದ ನೋಂದಣಿಗೆ ಸಂಬಂಧಿಸಿದ ಯಾವುದೇ ಅರ್ಜಿಯನ್ನು ಅದು

ಭಾರತದ ಭದ್ರತೆಯ ಹಿತಾಸಕ್ತಿಗೆ ಬಾಧಕವಾಗುತ್ತದೆಂದು ಅವನು ಭಾವಿಸಿದರೆ ಅದನ್ನು ಬಹಿರಂಗಪಡಿಸತಕ್ಕದ್ದಲ್ಲ; ಮತ್ತು

(ಬಿ) ಭಾರತದ ಭದ್ರತೆಯ ಹಿತದೃಷ್ಟಿಯಿಂದ ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಈ ಅಧಿನಿಯಮದ ಮೇರೆಗೆ ನೋಂದಾಯಿಸಿದ ಅಂಥ ವಿನ್ಯಾಸದ ನೋಂದಣಿಯ ರದ್ದಿಯಾತಿಯ ಸಂಬಂಧದಲ್ಲಿ ಯಾವುದೇ ಕ್ರಮ ತೆಗೆದುಕೊಳ್ಳತಕ್ಕದ್ದು.

**ವಿವರಣೆ.–** ಈ ಪ್ರಕರಣದ ಉದ್ದೇಶಗಳಿಗಾಗಿ, "ಭಾರತದ ಭದ್ರತೆ" ಎಂಬ ಪದಾವಳಿಗೆ, ಯುದ್ಧಕ್ಕಾಗಿ ಬಳಸಿದ ಅಥವಾ ಮಿಲಿಟರಿ ಕಾರ್ಯಸಂಸ್ಥೆಯ ಉದ್ದೇಶಕ್ಕಾಗಿ ಅಥವಾ ಯುದ್ಧ ಅಥವಾ ಅಂತರ ರಾಷ್ಟ್ರೀಯ ಸಂಬಂಧಗಳ ಇತರೆ ತುರ್ತು ಪರಿಸ್ಥಿತಿಯ ಉದ್ದೇಶಗಳಿಗಾಗಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಬಳಸಿದ ಯಾವುದೇ ವಸ್ತುವಿಗೆ ಈ ಅಧಿನಿಯಮದ ಮೇರೆಗೆ ನೋಂದಾಯಿಸಿದ ಯಾವುದೇ ವಿನ್ಯಾಸದ ಬಳಕೆಗೆ ಸಂಬಂಧಿಸಿದಂತೆ ಭಾರತದ ಭದ್ರತೆಗಾಗಿ ಅವಶ್ಯವಿರುವ ಯಾವುದೇ ಕ್ರಮ ಎಂದು ಅರ್ಥ.

**47. ನಿಯಮಗಳನ್ನು ರಚಿಸಲು ಕೇಂದ್ರ ಸರ್ಕಾರದ ಅಧಿಕಾರ.–** (1) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆ ಮೂಲಕ, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ನಿರ್ದಿಷ್ಟವಾಗಿ ಮತ್ತು ಈ ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳಲ್ಲಿ ಈ ಮುಂದಿನ ಎಲ್ಲ ವಿಷಯಗಳಿಗಾಗಿ ಅಥವಾ ಯಾವುವೇ ವಿಷಯಕ್ಕಾಗಿ ಉಪಬಂಧ ಕಲ್ಪಿಸಬಹುದು, ಎಂದರೆ:–

ಎ) 5ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ವಿನ್ಯಾಸದ ನೋಂದಣಿಗಾಗಿ ಅರ್ಜಿಯ ನಮೂನೆ, ಪೇಟೆಂಟ್ ಕಚೇರಿಯಲ್ಲಿ ಅದನ್ನು ಸಲ್ಲಿಸುವ ವಿಧಾನ ಮತ್ತು ಅದರ ಜೊತೆ ನೀಡಬೇಕಾದ ಶುಲ್ಕ;

ಬಿ) 5ನೇ ಪ್ರಕರಣದ (5)ನೇ ಉಪ ಪ್ರಕರಣದ ಮೇರೆಗೆ ಯಾವ ಅವಧಿಯೊಳಗೆ ನೋಂದಣಿಯನ್ನು ಜಾರಿಗೆ ತರಬೇಕಾಗಿದೆಯೋ ಆ ಅವಧಿ;

ಸಿ) 6ನೇ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗೆ ನೋಂದಣಿಗಾಗಿ ವಸ್ತುಗಳ ವರ್ಗೀಕರಣ;

ಡಿ) 7ನೇ ಪ್ರಕರಣದ ಮೇರೆಗೆ ಪ್ರಕಟಿಸಬೇಕಾದ ವಿನ್ಯಾಸದ ವಿವರಗಳು ಮತ್ತು ಅವುಗಳ ಪ್ರಕಟಣೆಯ ವಿಧಾನ;

ಇ) 8ನೇ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗೆ ಕ್ಲೇಮು ಮಾಡುವ ವಿಧಾನ;

ಎಫ್) 8ನೇ ಪ್ರಕರಣದ (5)ನೇ ಉಪಪ್ರಕರಣದ ಮೇರೆಗೆ ನಿಯಂತ್ರಕನಿಗೆ ಅರ್ಜಿಗಳನ್ನು ಸಲ್ಲಿಸುವ ವಿಧಾನ;

ಜಿ) 10ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ವಿನ್ಯಾಸಗಳ ರಿಜಿಸ್ಟರಿನಲ್ಲಿ ನಮೂದಿಸಬೇಕಾದ ಹೆಚ್ಚಿನ ವಿಷಯಗಳು ಮತ್ತು ಗಣಕಯಂತ್ರದ ಫ್ಲಾಪಿಗಳಲ್ಲಿ ಅಥವಾ ಡಿಸ್ಕೇಟ್‌ಗಳಲ್ಲಿ ಅಂಥ ರಿಜಿಸ್ಟರನ್ನು ನಿರ್ವಹಿಸುವಲ್ಲಿ ಮಾಡಬೇಕಾದ ಸುರಕ್ಷತೆಗಳು;

ಹೆಚ್) 11ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಕೃತಿಸ್ವಾಮ್ಯದ ಅವಧಿ ವಿಸ್ತರಣೆಗಾಗಿ ಅರ್ಜಿ ಸಲ್ಲಿಸುವ ವಿಧಾನ ಮತ್ತು ಅದಕ್ಕಾಗಿ ಸಂದಾಯ ಮಾಡಬೇಕಾದ ಫೀಜು;

ಐ) 12ನೇ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗೆ ವಿನ್ಯಾಸವನ್ನು ಪೂರ್ವಸ್ಥಿತಿಗೆ ತರುವುದಕ್ಕಾಗಿ ಅರ್ಜಿ ಸಲ್ಲಿಸುವ ವಿಧಾನ ಮತ್ತು ಅದರೊಂದಿಗೆ ಸಂದಾಯ ಮಾಡಬೇಕಾದ ಫೀಜು;

ಜೆ) 12ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಅರ್ಜಿಯಲ್ಲಿ ಒಳಗೊಂಡಿರುವ ವಿವರಣೆಯನ್ನು ಸತ್ಯಾಪನೆ ಮಾಡುವ ವಿಧಾನ;

ಕೆ) 13ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ವಿನ್ಯಾಸದ ನೋಂದಣಿಯನ್ನು ಪೂರ್ವಸ್ಥಿತಿಗೆ ತರಲು ಸಂದಾಯ ಮಾಡಬೇಕಾದ ಹೆಚ್ಚಿನ ಫೀಜು;

ಎಲ್) 14ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ನೋಂದಾಯಿತ ಮಾಲೀಕನ ಹಕ್ಕು ಯಾವ ಉಪಬಂಧಗಳಿಗೆ ಒಳಪಟ್ಟಿರತಕ್ಕದ್ದೋ ಅಂಥ ಉಪಬಂಧಗಳು;

ಎಂ) 15ನೇ ಪ್ರಕರಣದ (1)ನೇ ಉಪಪ್ರಕರಣದ (ಎ) ಖಂಡದ ಮೇರೆಗೆ ನಿಯಂತ್ರಕನಿಗೆ ಒದಗಿಸಬೇಕಾದ ವಿನ್ಯಾಸದ ಖಚಿತ ನಿರೂಪಣೆಯ ಅಥವಾ ಮಾದರಿಯ ಸಂಖ್ಯೆ;

ಎನ್) 15ನೇ ಪ್ರಕರಣದ (1)ನೆಯ ಉಪಪ್ರಕರಣದ (ಬಿ) ಖಂಡದ ಮೇರೆಗೆ ವಿನ್ಯಾಸವು ನೋಂದಾಯಿತವಾಗಿದೆಯೆಂಬುದು ಕಂಡುಬರುವಂತೆ ವಸ್ತುವಿನ ಮೇಲೆ ಯಾವ ಗುರುತನ್ನು, ಪದಗಳನ್ನು ಮತ್ತು ಅಂಕಿಗಳನ್ನು ಹಾಕಬೇಕೋ ಆ ಗುರುತು, ಪದಗಳು ಅಥವಾ ಅಂಕಿಗಳು;

ಓ) 15ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಗುರುತು ಮಾಡುವುದಕ್ಕೆ ಸಂಬಂಧಿಸಿದಂತೆ, ವಸ್ತುಗಳ ಯಾವುದೇ ವರ್ಗ ಅಥವಾ ವರ್ಣನೆಯ ಸಂಬಂಧದಲ್ಲಿ ಮತ್ತು ಆ ಪ್ರಕರಣದ ಯಾವುದೇ ಅಗತ್ಯತೆಯ ಸಂಬಂಧದಲ್ಲಿ ಬಿಟ್ಟುಬಿಡಬೇಕಾದ ಅಥವಾ ಮಾರ್ಪಾಟುಗೊಳಿಸಬೇಕಾದ ನಿಯಮಗಳು;

ಪಿ) 17ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಪರಿಶೀಲನೆಗಾಗಿ ಸಂದಾಯ ಮಾಡಬೇಕಾದ ಫೀಜು ಮತ್ತು ಪರಿಶೀಲನೆ ನಡೆಸುವ ವಿಧಾನ;

ಕ್ಯೂ) 17ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಯಾವುದೇ ವಿನ್ಯಾಸದ ಪ್ರಮಾಣೀಕೃತ ಪ್ರತಿಯನ್ನು ಪಡೆಯುವುದಕ್ಕೆ ಸಂದಾಯ ಮಾಡಬೇಕಾದ ಫೀಜು;

ಆರ್) ಯಾವ ಫೀಜನ್ನು ಪಾವತಿ ಮಾಡಿದ ಮೇಲೆ 18ನೇ ಪ್ರಕರಣದ ಮೇರೆಗೆ ನಿಯಂತ್ರಕನು ಮಾಹಿತಿಯನ್ನು ತಿಳಿಸಬೇಕೋ ಆ ಫೀಜು;

ಎಸ್) 21ನೇ ಪ್ರಕರಣದ ಪರಂತುಕದ (ಎ) ಖಂಡದ ಮೇರೆಗೆ ನಿಯಂತ್ರಕನಿಗೆ ನೋಟೀಸು ನೀಡಲು ನಮೂನೆ;

ಟಿ) 24ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ವಿನ್ಯಾಸಗಳ ನೋಂದಣಿಯ ಮತ್ತು ಅದರ ಅರ್ಜಿಯ ಸಂಬಂಧದಲ್ಲಿ ಮತ್ತು ವಿನ್ಯಾಸಗಳಿಗೆ ಸಂಬಂಧಪಟ್ಟ ಇತರೆ ವಿಷಯಗಳ ಬಗ್ಗೆ ಸಂದಾಯ ಮಾಡಬೇಕಾದ ಫೀಜು;

ಯು) 26ನೇ ಪ್ರಕರಣದ ಮೇರೆಗೆ ರಿಜಿಸ್ಟರಿನಲ್ಲಿ ಮಾಡಿರುವ ಯಾವುದೇ ನಮೂದಿನ ಪ್ರಮಾಣೀಕೃತ ಪ್ರತಿಯನ್ನು ಕೊಡುವುದಕ್ಕೆ ಸಂದಾಯ ಮಾಡಬೇಕಾದ ಫೀಜು;

ವಿ) 29ನೇ ಪ್ರಕರಣದ ಮೇರೆಗೆ ಯಾವುದೇ ಲಿಪಿಕ ದೋಷಗಳನ್ನು ಸರಿಪಡಿಸುವುದಕ್ಕೆ ಲಿಖಿತ ಕೋರಿಕೆಯೊಂದಿಗೆ ಸಂದಾಯ ಮಾಡಬೇಕಾದ ಫೀಜು;

ಡಬ್ಲ್ಯೂ) 30ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಮಾಲೀಕನಾಗಿ ನೋಂದಣಿಗೆ ಅರ್ಜಿ ಸಲ್ಲಿಸುವ ನಮೂನೆ ಮತ್ತು ನಿಯಂತ್ರಕನು ಹಕ್ಕು ಸ್ವಾಮ್ಯವನ್ನು ಜಾರಿಗೆ ತರುವ ಹಸ್ತಾಂತರಣದ, ವರ್ಗಾವಣೆಯ ಅಥವಾ ಇತರ ಲಿಖಿತದ ರಿಜಿಸ್ಟರಿನಲ್ಲಿ ನಮೂದು ಮಾಡಿಸುವ ವಿಧಾನ;

ಎಕ್ಸ್) 30ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಹಕ್ಕು ಸ್ವಾಮ್ಯಕ್ಕಾಗಿ ಅರ್ಜಿ ಸಲ್ಲಿಸುವ ನಮೂನೆ ಮತ್ತು ನಿಯಂತ್ರಕನು, ಹಿತಾಸಕ್ತಿಯ ನೋಟೀಸನ್ನು ಅಂಥ ಹಿತಾಸಕ್ತಿಯನ್ನು ಸೃಜಿಸುವ ಲಿಖಿತದ ವಿವರಗಳೇನಾದರೂ ಇದ್ದರೆ, ಅವುಗಳನ್ನು ವಿನ್ಯಾಸಗಳ ರಿಜಿಸ್ಟರಿನಲ್ಲಿ ನಮೂದು ಮಾಡಿಸುವ ವಿಧಾನ;

ವೈ) 30ನೇ ಪ್ರಕರಣದ (3)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದಂತೆ ನೋಂದಣಿಗಾಗಿ ಅರ್ಜಿಯನ್ನು ಸಲ್ಲಿಸುವ ಮತ್ತು ಅವಧಿಯ ವಿಸ್ತರಣೆಗಾಗಿ ಅರ್ಜಿ ಸಲ್ಲಿಸುವ ವಿಧಾನ;

ಝಡ್) 31ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ರಿಜಿಸ್ಟರನ್ನು ತಿದ್ದಿ ಸರಿಪಡಿಸುವುದಕ್ಕಾಗಿ ನಿಯಂತ್ರಕನಿಗೆ ಅರ್ಜಿ ಸಲ್ಲಿಸುವ ವಿಧಾನ;

ಝಡ್ಎ) 31ನೇ ಪ್ರಕರಣದ (4)ನೇ ಉಪಪ್ರಕರಣದ ಮೇರೆಗೆ ತಿದ್ದಿ ಸರಿಪಡಿಸುವ ನೋಟೀಸನ್ನು ನಿಯಂತ್ರಕನಿಗೆ ಜಾರಿ ಮಾಡುವ ವಿಧಾನ;

ಝಡ್ಬಿ) 32ನೇ ಪ್ರಕರಣದ ಮೇರೆಗೆ ನಿಯಂತ್ರಕನ ಮುಂದಿರುವ ವ್ಯವಹರಣೆಗಳನ್ನು ವಿನಿಯಮಿಸುವ ನಿಯಮಗಳು;

ಝಡ್ಸಿ) 33ನೇ ಪ್ರಕರಣದ ಮೇರೆಗೆ ಅಹವಾಲು ಹೇಳಿಕೊಳ್ಳಲು ಅರ್ಜಿದಾರರಿಗೆ ನಿಯಂತ್ರಕನು ನೀಡತಕ್ಕ ಕಾಲಾವಕಾಶ;

(ಝಡ್ಡಿ) 36ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಅಪೀಲಿನೊಂದಿಗೆ ಸಲ್ಲಿಸಬೇಕಾದ ಫೀಜು;

ಝಡ್ಇ) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದಂಥ ಯಾವುದೇ ಇತರ ವಿಷಯ;

(3) ಈ ಪ್ರಕರಣದ ಮೇರೆಗೆ ನಿಯಮಗಳನ್ನು ರಚಿಸುವ ಅಧಿಕಾರವು, ರಚಿಸಲಾಗುವ ನಿಯಮಗಳ ಪೂರ್ವ ಪ್ರಕಟಣೆಯ ಷರತ್ತುಗಳಿಗೊಳಪಟ್ಟಿರತಕ್ಕದ್ದು.

(4) ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚಿನ ಅಧಿವೇಶನಗಳಲ್ಲಿ ಅಡಕವಾಗಬಹುದಾದಂಥ ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ ಇಡತಕ್ಕದ್ದು, ಮತ್ತು ಹಿಂದೆ ಹೇಳಿದ ಅಧಿವೇಶನ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಸಂದರ್ಭಾನುಸಾರ ಪರಿಣಾಮಕಾರಿಯಾಗತಕ್ಕದ್ದಲ್ಲ, ಆದಾಗ್ಯೂ, ಯಾವುದೇ ಅಂಥ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

## ಅಧ್ಯಾಯ – XI

### ನಿರಸನ ಮತ್ತು ಉಳಿಸುವಿಕೆ

**48. ನಿರಸನ ಮತ್ತು ಉಳಿಸುವಿಕೆಗಳು.–** (1) ವಿನ್ಯಾಸಗಳ ಅಧಿನಿಯಮ, 1911ರ (1911ರ 2) ಇದನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

(2) ನಿರಸನಗಳಿಗೆ ಸಂಬಂಧಪಟ್ಟಂತೆ ಸಾಮಾನ್ಯ ಖಂಡಗಳ ಅಧಿನಿಯಮ, 1897 (1897ರ 10)ರಲ್ಲಿ ಒಳಗೊಂಡಿರುವ ಉಪಬಂಧಗಳಿಗೆ ಬಾಧಕವಾಗದಂತೆ ವಿನ್ಯಾಸಗಳ ಅಧಿನಿಯಮ, 1911 (1911ರ 2)ರ ಮೇರೆಗೆ ರಚಿಸಿದ, ನೀಡಿದ, ಕೊಟ್ಟ ಅಥವಾ ಮಾಡಿದ ಯಾವುದೇ ಅಧಿಸೂಚನೆ, ನಿಯಮ, ಆದೇಶ, ಅಗತ್ಯತೆ, ನೋಂದಣಿ, ಪ್ರಮಾಣಪತ್ರ, ನೋಟೀಸು, ತೀರ್ಮಾನ, ನಿರ್ಣಯ, ನಿರ್ದೇಶನ, ಅನುಮೋದನೆ, ಅಧಿಕಾರ ನೀಡಿಕೆ, ಸಮ್ಮತಿ, ಅರ್ಜಿ, ಕೋರಿಕೆ ಅಥವಾ ವಿಷಯವು ಈ ಅಧಿನಿಯಮದ ಪ್ರಾರಂಭದಲ್ಲಿ ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದು ಮತ್ತು ಈ ಅಧಿನಿಯಮದ ಸಂವಾದಿ ಉಪಬಂಧಗಳ ಮೇರೆಗೆ ರಚಿಸಿದ್ದರೆ, ನೀಡಿದ್ದರೆ, ಕೊಟ್ಟಿದ್ದರೆ ಅಥವಾ ಮಾಡಿದ್ದರೆ ಹೇಗೋ ಹಾಗೆ ಪರಿಣಾಮ ಹೊಂದಿರತಕ್ಕದ್ದು.

(3) ಈ ಅಧಿನಿಯಮದ ಉಪಬಂಧಗಳು ಈ ಅಧಿನಿಯಮದ ಪ್ರಾರಂಭದಲ್ಲಿ ಇತ್ಯರ್ಥದಲ್ಲಿರುವ ವಿನ್ಯಾಸಗಳ ನೋಂದಣಿಯ ಎಲ್ಲ ಅರ್ಜಿಗಳಿಗೆ ಮತ್ತು ಆ ಪರಿಣಾಮವಾಗಿ ನಡೆದ ಯಾವುವೇ ವ್ಯವಹರಣೆಗಳಿಗೆ ಮತ್ತು ಅದರ ಅನುಸಾರವಾಗಿ ಮಂಜೂರು ಮಾಡಿದ ಯಾವುದೇ ನೋಂದಣಿಗೆ ಅನ್ವಯವಾಗತಕ್ಕದ್ದು.

(4) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಪ್ರಾರಂಭದಲ್ಲಿ ಯಾವುದೇ ನ್ಯಾಯಾಲಯದಲ್ಲಿ ಇತ್ಯರ್ಥದಲ್ಲಿರುವ ಯಾವುದೇ ವ್ಯವಹರಣೆಯು ಈ ಅಧಿನಿಯಮವು ಅಂಗೀಕಾರವಾಗಿರದಿದ್ದರೆ ಹೇಗೋ ಹಾಗೆ ಆ ನ್ಯಾಯಾಲಯದಲ್ಲಿಯೇ ಮುಂದುವರಿಯಬಹುದು.

(5) (2)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ನೋಂದಾಯಿಸಿದ ವಿನ್ಯಾಸಗಳಲ್ಲಿನ, ಕೃತಿಸ್ವಾಮ್ಯದ ಮುಕ್ತಾಯ ದಿನಾಂಕವು, ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಯಾವ ಐದು ವರ್ಷಗಳಿಗೆ ಅದನ್ನು ನೋಂದಾಯಿಸಲಾಗಿತ್ತೋ ಆ ಐದು ವರ್ಷಗಳ ಅವಧಿಯ ನಿಕಟೋತ್ತರದ ದಿನಾಂಕ ಅಥವಾ ಹಿಂದೆ ಮಾಡಿದ್ದ ಮೂಲ ಅವಧಿಯು ಮುಕ್ತಾಯವಾದ

ದಿನಾಂಕದಿಂದ ಎರಡನೆಯ ಅವಧಿಗೆ ಕೃತಿಸ್ವಾಮ್ಯದ ಅವಧಿಯನ್ನು ಯಾವ ಐದು ವರ್ಷಗಳ ಅವಧಿಗೆ ವಿಸ್ತರಿಸಲಾಯಿತೋ ಆ ಐದು ವರ್ಷಗಳ ಅವಧಿಯ ನಿಕಟೋತ್ತರದ ದಿನಾಂಕ ಆಗಿರತಕ್ಕದ್ದು.

*****

(DOT- Commission-M.R. 11.11.09)